بِسْمِ اللهِ الرَّحْمٰنِ الرَّحِيْمِ     نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ     وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 04

ಕನ್ನಡ **ಬದರ್** ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 18

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

04 ಮೇ 2023, 04 ಹಿಜ್ರತ್ 1402 ಹಿಜರಿ ಶಮ್ಸಿ,
13 ಶವ್ವಾಲ್ 1444 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

قَوْلٌ مَّعْرُوْفٌ وَّمَغْفِرَةٌ
خَيْرٌ مِّنْ صَدَقَةٍ يَّتْبَعُهَآ اَذًى ۗ
وَاللّٰهُ غَنِيٌّ حَلِيْمٌ

(ಅಲ್–ಬಖರ: 264)

ಅಂದರೆ: ನಲ್ಮೆಯ ಮಾತು ಮತ್ತು ಕ್ಷಮೆ ಮನನೋಯಿಸುವ ದಾನ ಧರ್ಮಕ್ಕಿಂತ ಉತ್ತಮ. ಅಲ್ಲಾಹನು ಸ್ವಯಂಪೂರ್ಣನೂ ಕ್ಷಮಾಶೀಲನೂ ಆಗಿದ್ದಾನೆ.

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

**ಎರಡೂ ಈದ್‌ಗಳ ರಾತ್ರಿಯಲ್ಲಿ ತಹಜ್ಜುದ್ ಪಠಿಸುವವನ ಹೃದಯವು ಶಾಶ್ವತವಾಗಿ ಪುನರುಜ್ಜೀವಗೊಳಿಸಲಾಗುವುದು**

* ಹಝ್ರತ್ ಪೈಗಂಬರ್[ಸ] ನುಡಿದರು, ಯಾರು ಅಲ್ಲಾಹನಿಗೋಸ್ಕರ ಮಾತ್ರ ಎರಡೂ ಈದ್‌ಗಳ ರಾತ್ರಿಯಲ್ಲಿ ಆರಾಧಿಸುವವನೋ, ಅವನ ಹೃದಯ ಶಾಶ್ವತವಾಗಿ ಪುನರುಜ್ಜೀವನಗೊಳ್ಳುತ್ತದೆ. ಮತ್ತು ಪ್ರಪಂಚದ ಎಲ್ಲಾ ಹೃದಯಗಳು ಸತ್ತರೂ ಅವನ ಹೃದಯವು ಸಾಯುವುದಿಲ್ಲ.

(ಸುನನ್ ಇಬ್ನು ಮಾಜ, ಕಿತಾಬುಸ್ಸಿಯಾಮ್, ಹದೀಸ್–1782)

* ರಸೂಲುಲ್ಲಾಹ್[ಸ] ಅವರು ನುಡಿದರು, ತಮ್ಮ ಈದ್‌ಗಳನ್ನು ಅಲ್ಲಾಹನ ಮಹಿಮೆಯನ್ನು ವಿವರಿಸುತ್ತಾ ಅಲಂಕರಿಸಿರಿ.

(ಕನ್‌ಝುಲ್ ಆಅ್‌ಮಾಲ್. ಭಗ–8, ಪುಟ–546, ಹದೀಸ್–24094, ಮುಅಸ್ಸಸುರ್ರಿಸಾಲ ಬೈರೂತ್ 1985)

* ರಸೂಲುಲ್ಲಾಹ್[ಸ] ಅವರು ನುಡಿದರು, ತಕ್ಬೀರ್ ಪಠಿಸುವ ಮೂಲಕ, ಅಲ್ಲಾಹನನ್ನು ಸ್ತುತಿಸುವುದರ ಮೂಲಕ ಮತ್ತು ಅಲ್ಲಾಹನ ಪವಿತ್ರತೆಯನ್ನು ತೋರಿಸುವುದರ ಮೂಲಕ ನಿಮ್ಮ ಈದ್‌ಗಳನ್ನು ಅಲಂಕರಿಸಿರಿ.

(ಕನ್‌ಝುಲ್ ಆಅ್‌ಮಾಲ್, ಭಾಗ–8, ಪುಟ–546, ಹದೀಸ್–24095, ಮುಅಸ್ಸಸುರ್ರಿಸಾಲ ಬೈರೂತ್ 1985)

(ಆಧಾರ ಖುತುಬ ಜುಮುಆ ಹುಝೂರ್ ಅನ್ವರ್[ಅಬಿಅ] 14 ನವೆಂಬರ್ 2004)

**ಇಸ್ಲಾಂ ಧರ್ಮದಲ್ಲಿ ಎರಡು ಹಬ್ಬಗಳಿವೆ. ಈ ಎರಡೂ ದಿನಗಳನ್ನು ಸಹ ತುಂಬಾ ಸಂತೋಷದ ದಿನಗಳೆಂದು ನಂಬಲಾಗಿದೆ. ಇದರಲ್ಲಿ ಆಶ್ಚರ್ಯಕರ ರೀತಿಯ ಅನುಗ್ರಹಗಳಿವೆ. ಆದರೆ ಒಂದು ದಿನ ಇವೆಲ್ಲದಿಕ್ಕಿಂತಲೂ ಹೆಚ್ಚು ಶುಭಕರ ಹಾಗೂ ಸಂತೋಷದ ದಿನವಿದೆ. ವಿಷಾದದ ಸಂಗತಿ ಏನೆಂದರೆ ಜನರು ಆ ದಿನವನ್ನು ಪ್ರತೀಕ್ಷೆ ಮಾಡುತ್ತಿಲ್ಲ. ಮತ್ತು ಅದನ್ನು ಪಡೆಯುವ ಪ್ರಯತ್ನವು ಮಾಡುವುದಿಲ್ಲ.**

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ಸರ್ವಶಕ್ತನಾದ ಅಲ್ಲಾಹನು ಇಸ್ಲಾಮ್‌ನಲ್ಲಿ ಅಂತಹ ದಿನಗಳನ್ನು ನಿಗದಿಪಿಸಿದ್ದಾನೆ ಎಂದು ನಿಮಗೆಲ್ಲರಿಗೂ ತಿಳಿದಿದೆ. ಆ ದಿನಗಳನ್ನು ಬಹಳ ಸಂತೋಷದ ದಿನಗಳೆಂದು ಪರಿಗಣಿಸಲಾಗುತ್ತದೆ. ಮತ್ತು ಅಲ್ಲಾಹನು ಅವುಗಳಲ್ಲಿ ಆಶ್ಚರ್ಯಕರ ರೀತಿಯ ಅನುಗ್ರಹಗಳನ್ನು ನೀಡಿದ್ದಾನೆ. ಅಂತಹದರಲ್ಲಿ ಶುಕ್ರವಾರವು ಒಂದಾಗಿದೆ. ಈ ದಿನವೂ ಅತ್ಯಂತ ಮಂಗಳಕರವಾಗಿದೆ. ಶುಕ್ರವಾರದಂದು ಅಲ್ಲಾಹನು ಹಝ್ರತ್ ಆದಮ್(ಅ) ರನ್ನು ಸೃಷ್ಟಿಸಿದನು. ಮತ್ತು ಆ ದಿನದಂದು ಅವನು ಅಂಗೀಕರಿಸಲ್ಪಟ್ಟನು ಮತ್ತು ಆ ದಿನಕ್ಕೆ ಅನೇಕ ಅನುಗ್ರಹಗಳು ಮತ್ತು ಸದ್ಗುಣಗಳನ್ನು ಸಲ್ಲುತ್ತದೆ ಎಂದು ಬರೆಯಲಾಗಿದೆ. ಹಾಗೆಯೇ ಇಸ್ಲಾಮ್‌ನಲ್ಲಿ ಎರಡು ಹಬ್ಬಗಳಿವೆ. ಈ ಎರಡು ದಿನಗಳನ್ನು ಬಹಳ ಸಂತೋಷದ ದಿನಗಳು ಎಂದು ಪರಿಗಣಿಸಲಾಗಿದೆ. ಮತ್ತು ಅವುಗಳಲ್ಲಿ ವಿಚಿತ್ರವಾದ ಅನುಗ್ರಹಗಳನ್ನು ಇರಿಸಲಾಗಿದೆ. ಆದರೆ ಈ ದಿನಗಳು ನಿಸ್ಸಂಶಯವಾಗಿ ಅನುಗ್ರಹದ ಮತ್ತು ಸಂತೋಷದ ದಿನಗಳು ಎಂದು ನೆನಪಿಡಿ. ಆದರೆ ಒಂದು ದಿನ ಅವೆಲ್ಲಕ್ಕಿಂತ ಹೆಚ್ಚು ಅನುಗ್ರಹದ ಮತ್ತು ಸಂತೋಷದ ದಿನವಾಗಿದೆ. ಆದರೆ ದುಃಖದ ಸಂಗತಿ ಏನೆಂದರೆ ಜನರು ಈ ದಿನಕ್ಕಾಗಿ ಅಥವಾ ಅದರ ಹುಡುಕಾಟಕ್ಕಾಗಿ ಕಾಯುವುದಿಲ್ಲ, ಅಥವಾ ಅದರ ಅನುಗ್ರಹಕ್ಕಾಗಿ ಕಾಯುವುದಿಲ್ಲ. ಅದರ ಅನುಗ್ರಹದ ಮತ್ತು ಗುಣಗಳ ಬಗ್ಗೆ ಮಾಹಿತಿಯಿರುತ್ತಿದ್ದರೆ ಅಥವಾ ಅದರ ಬಗ್ಗೆ ಕಾಳಜಿ ವಹಿಸುವವರಾಗುತ್ತಿದ್ದರೆ, ವಾಸ್ತವಾಗಿಯೂ ಆ ದಿನ ಅವರಿಗೆ ತುಂಬಾ ಶುಭಕರ ಹಾಗೂ ಸುದೈವದ ದಿನವಾಗುತ್ತಿತ್ತು. ಜನರು ಅದನ್ನು ಆದರಿಸುತ್ತಿದ್ದರು. ಆ ದಿನ ಯಾವುದು, ಅದು ಜುಮುಅವಾಗಿದೆ ಹಬ್ಬಗಳಿಗಿಂದಲೂ ಉತ್ತಮ ಮತ್ತು ಶುಭ ದಿನವಾಗಿದೆ. ನಾನು ನಿಮಗೆ ತಿಳಿಸುವೆನು. ಆ ದಿನ ಮನುಷ್ಯನ ಪಶ್ಚಾತ್ತಾಪಪಡುವ ದಿನವಾಗಿದೆ. ಅದು ಅವೆಲ್ಲಕ್ಕಿಂತಲೂ ಉತ್ತಮವಾಗಿದೆ. ಎಲ್ಲ ಹಬ್ಬಗಳಿಂದಲೂ ಉತ್ತಮವಾಗಿದೆ. ಏಕೆ? ಏಕೆಂದರೆ ಆ ದಿನ ಮನುಷ್ಯನ ಎಲ್ಲಾ ದುಷ್ಕರ್ಮಗಳನ್ನು ಅದರಿಂದ ಅವನು ನರಕಕ್ಕೆ ಸಮೀಪವಾಗುತ್ತಿದ್ದನು ಮತ್ತು ಅವನ ಪಾಪಗಳು ಕ್ಷಮಿಸಲ್ಪಡುವವು. ವಾಸ್ತವದಲ್ಲಿ ಅದಕ್ಕಿಂತ ಮಿಗಿಲಾದ ಸಂತೋಷದ ದಿನ ಮನುಷ್ಯನಿಗೆ ಯವ ಹಬ್ಬದ ದಿನವಾಗಬಹುದು. ಅದು ಅವನಿಗೆ ಶಾಶ್ವತವಾದ ನರಕದಿಂದ ಮತ್ತು ದೈವಿಕ ಪ್ರಕೋಪದಿಂದ ಮೋಕ್ಷ ನೀಡುವಂತಹದ್ದು, ಪಶ್ಚಾತ್ತಾಪಪಡುವನು ಮೊದಲು ಪಾಪಗಳಿಂದಾಗಿ ದೇವನಿಂದ ದೂರವಾಗುತ್ತಿದ್ದ, ಅವನ ಪ್ರಕೋಪಕ್ಕೆ ಗುರಿಯಾಗಿದ್ದ, ಇದೀಗ ಅವನ ಕರುಣೆಯಿಂದ ಅವನ ಸಮೀಪವಾಗುತ್ತಾನೆ ಮತ್ತು ನರಕದ ಶಿಕ್ಷೆಯಿಂದ ರಕ್ಷಿಸಲ್ಪಡುತ್ತಾನೆ. ಅಲ್ಲಾಹನು ಹೇಳಿದಂತೆ **ಇನ್ನಲ್ಲಾಹ ಯುಹಿಬುತ್ತವ್ವಾಬೀನ ವ ಯುಹಿಬ್ಬುಲ್ ಮುತತಹ್ಹಿರೀನ್.**

**(ಮಲ್ಫೂಝಾತ್, ಸಂಪುಟ–4, ಪುಟ–114, ಮುದ್ರಣ ಖಾದಿಯಾನ್ 2003)**

**ನೀವು ಇನ್ನೊಬ್ಬರಿಗೆ ಅರ್ಥವಾಗುವಂತೆ ಮಾತನಾಡಬೇಕು ಅದರಿಂದ ಅವನ ತಪ್ಪು ತಿಳುವಳಿಕೆಯು ದೂರವಾಗಬೇಕು**
**ಕೋಪ ಮತ್ತು ಉತ್ಸಾಹವನ್ನು ಅತ್ಯಧಿಕ ಹೊಂದಿರುವ ವ್ಯಕ್ತಿಯು ಇತರರನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ**
**ಶತ್ರುಗಳಿಗೆ ಏನು ಹೇಳುತ್ತೀರೋ ಅದನ್ನು ಸತ್ಯವಾಗಿ ಹೇಳಿರಿ, ಇತರರಿಗೆ ಮಾರ್ಗದರ್ಶನ ನೀಡುವಾಗ ನೀವು ದಾರಿ ತಪ್ಪಬೇಡಿ**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಅನ್ನಹಲ್ ಆಯತ್ 126 **ಉದ್‌ಊ ಇಲಾ ಸಬೀಲಿ ರಬ್ಬಿಕ ಬಿಲ್ ಹಿಕ್ಮತಿ ವಲ್‌ಮೋಯಿಝುತಿಲ್ ಹಸನತಿ ವಜಾದಿಲ್‌ಹುಮ್ ಬಿಲ್ಲತೀ ಹಿಯ ಅಹ್ಸನು, ಇನ್ನ ರಬ್ಬಕ ಹುವ ಅಅ್‌ಲಮು ಬಿಮನ್ ಝುಲ್ಲ ಅನ್ ಸಬೀಲಿಹೀ ವಹುವ ಅಅ್‌ಲಮು ಬಿಲ್ ಮುಹ್ತದೀನ್** ಅಂದರೆ ಜಾಣ್ಮೆಯಿಂದಲೂ ಸದುಪದೇಶದಿಂದಲೂ ನಿನ್ನ ಪ್ರಭುವಿನ ಮಾರ್ಗದೆಡೆಗೆ ನೀನು (ಜನರನ್ನು) ಆಮಂತ್ರಿಸು. ಉತ್ತಮವಾದ ರೀತಿಯಲ್ಲಿ ಅವರೊಡನೆ ವಾಗ್ವಾದ ಮಾಡು. ತನ್ನ ಮಾರ್ಗವನ್ನು ಬಿಟ್ಟು ಹೋಗುವವರು ಯಾರೆಂದು ನಿನ್ನ ಪ್ರಭು ಚೆನ್ನಾಗಿ ಬಲ್ಲವನಾಗಿದ್ದಾನೆ. ಸರಿಯಾದ ಮಾರ್ಗವನ್ನು ಅವಲಂಬಿಸುವವರು ಯಾರೆಂದೂ ಅವನು ಚೆನ್ನಾಗಿ ತಿಳಿದಿರುತ್ತಾನೆ. ಇದರ ವ್ಯಾಖ್ಯಾನ ಮಾಡುತ್ತ ಹೇಳುತ್ತಾರೆ.

ಬುದ್ಧಿವಂತಿಕೆ ಎಂದರೆ ನಮ್ರತೆ ಎಂಬ ಅರ್ಥವೂ ಇದೆ. ಹೇಳಿದರು, **"ಸೌಮ್ಯದಿಂದ** ಮತ್ತು ಸಾಮಾನ್ಯ ಜ್ಞಾನವನ್ನು ಬಳಸಿ ಮಾತನಾಡಬೇಕು,

*(ಪುಟ 10 ರಲ್ಲಿ ಮುಂದುವರಿಸಲಾಗಿದೆ)*

لَا إِلٰهَ إِلَّا اللّٰهُ مُحَمَّدٌ رَّسُوْلُ اللّٰهِ

# ಉಪವಾಸಗಳ ಮಹತ್ತರವಾದ ಆಧ್ಯಾತ್ಮಿಕ ಉಪಯೋಗಗಳು

# ಉಪವಾಸವು ದೈಹಿಕ ಆರೋಗ್ಯಕ್ಕೂ ಜಾಮೀನುದಾರ

ಉಪವಾಸದ ಮಹತ್ತರ ಉದ್ದೇಶವನ್ನು ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ **"ಲಅಲ್ಲಕುಮ್ ತತ್ತಖೂನ್"** ನೀವು ನೀತಿವಂತರಾಗಿರಿ ಎಂದು ಹೇಳಿದ್ದಾನೆ. ಅಂದರೆ, ಇದರಿಂದ ನೀವು ಧರ್ಮನಿಷ್ಠರನ್ನಾಗಿರಿ. ಅಂದರೆ ಉಪವಾಸದ ಪರಿಣಾಮವಾಗಿ ಒಬ್ಬ ವ್ಯಕ್ತಿಯು ಧರ್ಮನಿಷ್ಠೆಯಲ್ಲಿ ಪ್ರಗತಿ ಹೊಂದುತ್ತಾನೆ. ಧರ್ಮನಿಷ್ಠೆಯ ಬಗ್ಗೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತಮ್ಮ ಒಂದು ಕವಿತೆಯಲ್ಲಿ ಹೀಗೆ ಹೇಳುತ್ತಾರೆ:

ಹರ್ ಏಕ್ ನೇಕಿ ಕೀ ಜಡ್ ಯೆಹ್ ಇತ್ತೆಖಾ ಹೈ

ಅಗರ್ ಯೆಹ್ ಜಡ್ ರಹೀ ತೊ ಸಬ್ ಕುಚ್ ರಹಾ ಹೈ

ಅಂದರೆ: ಪ್ರತಿಯೊಂದು ಸತ್ಕರ್ಮಕ್ಕೂ ಮೂಲ ಈ ಧರ್ಮನಿಷ್ಠೆಯಾಗಿದೆ. ಈ ಮೂಲ ಇದ್ದರೆ ಎಲ್ಲವು ಉಳಿದಿರುವುದು.

ಇದರ ಎರಡನೇ ಚರಣವು ದೈವವಾಣಿಯಾಗಿದೆ. ಆದ್ದರಿಂದ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ಯಾರಿಗಾದರೂ ಧರ್ಮನಿಷ್ಠೆ ಇದ್ದರೆ, ಅವನು ಎಲ್ಲವನ್ನೂ ಹೊಂದಿದ್ದಾನೆ ಎಂದು ಅರ್ಥಮಾಡಿಕೊಳ್ಳಿ. ಧರ್ಮನಿಷ್ಠೆಯಿಂದ ಅನುಗ್ರಹಿಸಲ್ಪಟ್ಟವರನ್ನು ಧರ್ಮನಿಷ್ಠರು ಎಂದು ಕರೆಯಲಾಗುತ್ತದೆ. ಮತ್ತು ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಧರ್ಮನಿಷ್ಠೆಯ ಹಲವಾರು ಸದ್ಗುಣಗಳನ್ನು ವಿವರಿಸಿದ್ದಾನೆ. ಸೂರಾ ತಾಹಾದಲ್ಲಿ ಅಲ್ಲಾಹನು ಹೇಳುತ್ತಾನೆ, **ವಲ್‌ಆಖಿಬತು ಲಿತ್ತಖ್ವಾ** ಎಂದರೆ ಧರ್ಮನಿಷ್ಠೆಯ ಅಂತ್ಯವು ಉತ್ತಮವಾಗಿದೆ. ಸರ್ವಶಕ್ತನಾದ ಅಲ್ಲಾಹನು ಧರ್ಮನಿಷ್ಠರೊಂದಿಗೆ ದೊಡ್ಡ ದೊಡ್ಡ ಹಂತಗಳ ಬಗ್ಗೆ ವಾಗ್ದಾನ ಮಾಡಿದ್ದಾನೆ ಮತ್ತು ಅಲ್ಲಾಹನು ಧರ್ಮನಿಷ್ಠರೊಂದಿಗೆ ಇದ್ದಾನೆ ಎಂದು ಹೇಳುತ್ತಾನೆ. ಹೀಗೆ ಸೂರಾ ತೌಬಾದಲ್ಲಿ, ಸರ್ವಶಕ್ತನಾದ ಅಲ್ಲಾಹನು ಎರಡು ಸ್ಥಳಗಳಲ್ಲಿ ಹೀಗೆ ಹೇಳುತ್ತಾನೆ, **ವಅ್‌ಲಮೂ ಅನ್ನಲ್ಲಾಹ ಮಾಅಲ್ ಮುತ್ತಖೀನ್** ಅಂದರೆ: ಅಲ್ಲಾಹನು ಧರ್ಮನಿಷ್ಠರೊಂದಿಗೆ ಇದ್ದಾನೆ ಎಂದು ತಿಳಿಯಿರಿ. ಅಂದರೆ ಉಪವಾಸಗಳ ಕಾರಣದಿಂದ ಸರ್ವಶಕ್ತನಾದ ಅಲ್ಲಾಹನು ಭೇಟಿಯಾಗುತ್ತಾನೆ. ಮತ್ತು ರಸೂಲುಲ್ಲಾಹ್(ಸ) ಅವರು ಉಪವಾಸದ ಪರಿಣಾಮವಾಗಿ, ನಾವು ಅಲ್ಲಾಹನನ್ನು ಭೇಟಿಯಾಗಲು ಅನುಗ್ರಹಿಸಲ್ಪಡುತ್ತೇವೆ ಎಂದು ಹೇಳಿದ್ದಾರೆ. ಆದ್ದರಿಂದ ಉಪವಾಸ ಮಾಡುವವರಿಗೆ ಎರಡು ಸಂತೋಷಗಳಿವೆ, ಒಂದು ಅವನು ತನ್ನ ಉಪವಾಸವನ್ನು ಮುರಿದಾಗ ಮತ್ತು ಇನ್ನೊಂದು ಅವನು ತನ್ನ ಭಗವಂತನನ್ನು ಭೇಟಿಯಾದಾಗ. ಮತ್ತು ಈ ಭೇಟಿಯು ವಾಸ್ತವವಾಗಿ ಈ ಜಗತ್ತಿನಲ್ಲಿ ನಡೆಯುತ್ತದೆ. ಮತ್ತು ಇನ್ನೊಂದು ಹದೀಸ್‌ನಲ್ಲಿ, ಇದು ಹದೀಸೆ ಖುದ್ಸಿಯಾಗಿದೆ. ಅದರಲ್ಲಿ ಸರ್ವಶಕ್ತನಾದ ಅಲ್ಲಾಹನು ಉಪವಾಸದ ಪ್ರತಿಫಲದಲ್ಲಿ ನಾನೇ ಸ್ವತಃ ಆಗುತ್ತೇನೆ ಎಂದು ಹೇಳುತ್ತಾನೆ. ಅಂದರೆ, ಉಪವಾಸದ ಪ್ರತಿಯಾಗಿ, ನಾನು ಅವನನ್ನು ಭೇಟಿಯಾಗುತ್ತೇನೆ. ಆದ್ದರಿಂದ ಉಪವಾಸದ ಆಧ್ಯಾತ್ಮಿಕ ಪ್ರಯೋಜನವು ಉತ್ತಮವಾಗಿದೆ ಏಕೆಂದರೆ ಅದು ಅಲ್ಲಾಹನ ಅನುಗ್ರಹಕ್ಕೆ ಕಾರಣವಾಗುತ್ತದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: **"ಶಹರು ರಮಝಾನಲ್ಲಝೀ ಉನ್‌ಝಿಲ ಫೀಹಿಲ್ ಖುರ್‌ಆನ್** ಪವಿತ್ರ ಖುರ್‌ಆನಿನಲ್ಲಿ ಪ್ರಕಟವಾದ ರಮಝಾನ್ ತಿಂಗಳ ಹಿರಿಮೆಯನ್ನು ತೋರಿಸುವ ನುಡಿಗಟ್ಟು ಕೂಡ ಆಗಿದೆ. ಈ ತಿಂಗಳು ಹೃದಯ ಜ್ಞಾನೋದಯಕ್ಕೆ ಉತ್ತಮ ತಿಂಗಳು ಎಂದು ಸೂಫಿಯರು ಬರೆಯುತ್ತಾರೆ. ಮತ್ತು ಇದರಲ್ಲಿ ಹೆಚ್ಚುಹೆಚ್ಚಾಗಿ ದಿವ್ಯಜ್ಞಾನ ಪ್ರಕಟಗೊಳ್ಳುತ್ತದೆ, ಸಲಾತ್ ಆತ್ಮವನ್ನು ಶುದ್ಧಗೊಳಿಸುತ್ತದೆ ಮತ್ತು ಉಪವಾಸವು ಹೃದಯವನ್ನು ಸಾಕ್ಷಾತ್ಕಾರಗೊಳಿಸುತ್ತದೆ. ಆತ್ಮ ಶುದ್ಧಿ ಎಂದರೆ ದುಷ್ಪ್ರೇರಕ ಆತ್ಮವು ಕಾಮೇಚ್ಛೆಗಳಿಂದ ದೂರ ಉಳಿಯುವುದು ಮತ್ತು ಹೃದಯವು ಸಾಕ್ಷಾತ್ಕಾರಗೊಳ್ಳುವುದು ಎಂದರೆ ಅದೃಶ್ಯ ವಿಷಯಗಳ ಬಾಗಿಲು ಅವನ ಮೇಲೆ ತೆರೆಯಲಾಗುವುದು ಅದರಿಂದ ಅವನು ಅಲ್ಲಾಹನನ್ನು ನೋಡುವನು." **(ಮಲ್‌ಫೂಝಾತ್, ಸಂಪುಟ-2, ಪುಟ-561, ಪ್ರಕಟಿತ ಖಾದಿಯಾನ್ 2003)**

ಉಪವಾಸವು ಅಸಂಖ್ಯಾತ ಆಧ್ಯಾತ್ಮಿಕ ಪ್ರಯೋಜನಗಳನ್ನು ಹೊಂದಿದೆ ಮತ್ತು ಒಬ್ಬ ಮುಮಿನ್ ಉಪವಾಸದ ಮೂಲಕ ಈ ಎಲ್ಲಾ ಪ್ರಯೋಜನಗಳನ್ನು ಒಟ್ಟುಗೂಡಿಸಿದಾಗ, ಅವನು ಧರ್ಮನಿಷ್ಠೆಯಲ್ಲಿ ಬೆಳೆಯುವುದನ್ನು ಮುಂದುವರೆಸುತ್ತಾನೆ ಮತ್ತು ಮತ್ತೊಮ್ಮೆ ಅವನು ಸರ್ವಶಕ್ತನಾದ ಅಲ್ಲಾಹನು ಅವರನ್ನು ಭೇಟಿಯಾಗುವ ಮೂಲಕ ಅನುಗ್ರಹಿಸುತ್ತಾನೆ. ಆದ್ದರಿಂದ, ಉಪವಾಸದ ದೊಡ್ಡ ಆಧ್ಯಾತ್ಮಿಕ ಪ್ರಯೋಜನವೆಂದರೆ ಅಲ್ಲಾನನ್ನು ಭೇಟಿ ಮಾಡುವುದು. ಇದರೊಂದಿಗೆ ಉಪವಾಸದಿಂದ ಅನೇಕ ಭೌತಿಕ ಪ್ರಯೋಜನಗಳಿವೆ. ಇದು ಆರೋಗ್ಯವನ್ನು ಸುಧಾರಿಸುತ್ತದೆ. ಆದ್ದರಿಂದ, ಹದೀಸ್‌ನಲ್ಲಿ, **ಸೌಮ್ವೂ ತಾಸಿಹ್ಹೂ** (ಅಲ್-ಮ'ಜಮ್ ಅಲ್-ಅವ್ಸಾತ್, 8/174, ಸಂ. 8312) ಇದೆ, ಅಂದರೆ ನೀವು ಆರೋಗ್ಯಕರವಾಗಲು ಉಪವಾಸ ಮಾಡಿ. ಇದು ಆಧ್ಯಾತ್ಮಿಕ ಮತ್ತು ದೈಹಿಕ ಆರೋಗ್ಯವನ್ನು ಸೂಚಿಸುತ್ತದೆ.

ಹಝ್ರತ್ ಖಲೀಫತುಲ್ ಮಾಸಿಹ್ ರಾಬಿ(ರಹ) ಹೇಳುತ್ತಾರೆ: ನಮ್ಮ ಆರೋಗ್ಯವು ಸರಿ ಇರುವುದಿಲ್ಲ ಆದ್ದರಿಂದ ನಾವು ಉಪವಾಸ ಮಾಡುವುದಿಲ್ಲ ಎಂದು ಕೆಲವರು ಹೇಳುತ್ತಾರೆದಿದು ಸಂಪೂರ್ಣ ವ್ಯರ್ಥ ಮಾತಾಗಿದೆ. ಉಪವಾಸದಿಂದಲೇ ಆರೋಗ್ಯವು ಉತ್ತಮವಾಗಿರುವುದು. ಮತ್ತು ರಮಝಾನ್ ಅನ್ನು ಉತ್ತಮ ಸ್ಥಿತಿಯಲ್ಲಿ ಕಳೆಯುವವರು ಯಾರೂ ಇಲ್ಲ ಮತ್ತು ಮೊದಲಿಗಿಂತ ಉತ್ತಮವಾಗುವುದಿಲ್ಲ. ನಾನು ಈ ಕೊನೆಯ ರಮಝಾನ್‌ನಲ್ಲಿ ಬಹುಶಃ ಇದನ್ನು ಉಲ್ಲೇಖಿಸಿದೆ ಅಂದರೆ ಇಸ್ರಾಈಲ್‌ನ ಓರ್ವ ವೈದ್ಯರು ಬಹುಶಃ ಇಸ್ಲಾಂ ಧರ್ಮದ ಮೇಲೆ ಆಕ್ರಮಣ ಮಾಡುವ ಉದ್ದೇಶದಿಂದ ಮತ್ತು ಉಪವಾಸದಿಂದ ಮಕ್ಕಳ ಆರೋಗ್ಯವನ್ನು ಹಾಳುಮಾಡುತ್ತಾರೆ, ವಯಸ್ಸಾದವರ, ದುರ್ಬಲರ ಆರೋಗ್ಯವನ್ನು ಹಾಳು ಮಾಡುತ್ತಾರೆ ಇದು ಹಾನಿಕಾರಕ ಅಭ್ಯಾಸವಾಗಿದೆ ಎಂದು ಸಂಶೋಧನೆಯನ್ನು ಪ್ರಾರಂಭಿಸಲಾಗಿತ್ತು. ಮತ್ತು ಅವರು ಸಂಶೋಧನೆಯಲ್ಲಿ ಸತ್ಯವಂತರಾಗಿದ್ದರು, ದಾಳಿಯ ಉದ್ದೇಶವು ಕೆಟ್ಟದ್ದಾಗಿರಬೇಕು ಆದರೆ ಅವರು ಸಂಶೋಧನೆಯಲ್ಲಿ ಸತ್ಯವಂತರಾಗಿದ್ದರು ಎಂದು ನಾವು ಅವರಿಗೆ ಗೌರವ ಸಲ್ಲಿಸಬೇಕು. ಅವರು ಸಾಕಷ್ಟು ಸಂಶೋಧನೆ ಮಾಡಿದರು. ದುರ್ಬಲರ ಮೇಲೆ, ವೃದ್ಧರ ಮೇಲೆ, ಮಕ್ಕಳ ಮೇಲೆ. ಮತ್ತು ಸಂಶೋಧನೆಯ ಅಂತಿಮ ಫಲಿತಾಂಶವೆಂದರೆ ಉಪವಾಸ ಮಾಡುವ ಪ್ರತಿಯೊಬ್ಬರ ಆರೋಗ್ಯವು ರಂಜಾನ್‌ನಿಂದ ಮೊದಲು ಕೆಟ್ಟದಾಗಿತ್ತು, ಆದರೆ ರಂಜಾನ್ ನಂತರ ಅವರ ಆರೋಗ್ಯವು ಉತ್ತಮವಾಯಿತು. ಹಾಗಾಗಿ ಇಸ್ಲಾಂ ಧರ್ಮವನ್ನು ಕಟುವಾಗಿ ಟೀಕಿಸುತ್ತಿರುವ ಇಂದಿನ ಜಗತ್ತಿನಲ್ಲಿ ಈ ಜನರು ಹಝ್ರತ್ ಅಖ್ದಸ್ ಮುಹಮ್ಮದ್ ರಸೂಲುಲ್ಲಾ ಸಲ್ಲಲ್ಲಾಹು ಅಲೈಹಿವಸಲ್ಲಮ್ ಅವರ ಮಾತಿಗೆ ಸಾಕ್ಷಿಯಾಗುತ್ತಿದ್ದಾರೆ.

ಅವರು ಹೇಳಿದರು: **ಸೂಮೂ ತಸಿಹ್ಹೂ** ಉಪವಾಸವನ್ನು ಇರಿಸಿ, ನಿಮ್ಮ ಆರೋಗ್ಯವು ಉತ್ತಮವಾಗಿರುತ್ತದೆ, ಆದರೆ ಜನರು ಸಾಮಾನ್ಯವಾಗಿ ಯೋಚಿಸುವಂತೆ ಈ ಹದೀಸ್ ದೈಹಿಕ ಆರೋಗ್ಯವನ್ನು ಉಲ್ಲೇಖಿಸುವುದಿಲ್ಲ ಎಂದು ನಾನು ಅರ್ಥಮಾಡಿಕೊಂಡಿದ್ದೇನೆ. **ಸೂಮೂ ತಸಿಹ್ಹು** ಎಂದರೆ ನೀವು ಕ್ಷೇಮವಾಗುತ್ತೀರಿ. ಅನೇಕ ಅನಿಷ್ಟಗಳು ನಿಮ್ಮಿಂದಾಗಿವೆ. ನೀವು ಆಧ್ಯಾತ್ಮಿಕವಾಗಿ ಅಸ್ವಸ್ಥರಾಗಿದ್ದೀರಿ. ನಿನಗೆ ಗೊತ್ತಿಲ್ಲ. ನೀವು ಉಪವಾಸ ಮಾಡಿದರೆ, ಅನೇಕ ರೋಗಗಳು ಮಾಯವಾಗುತ್ತವೆ ಮತ್ತು ನಿಮ್ಮ ಆಧ್ಯಾತ್ಮಿಕ ದೇಹವು ಆರೋಗ್ಯದಿಂದ ಕೂಡಿರುತ್ತದೆ. (ಖುತ್‌ಬ ಜುಮುಅ, ಡಿಸೆಂಬರ್ 26, 1997, ಅಲ್-ಫಜಲ್ ಇಂಟರ್ನ್ಯಾಷನಲ್, ಫೆಬ್ರವರಿ 13, 1998)

ಸಯ್ಯಿದುನಾ ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ: "ಉಪವಾಸದ ಒಂದು ದೊಡ್ಡ ಪ್ರಯೋಜನವೆಂದರೆ, ಅದು ಮನುಷ್ಯನ ಒಳ್ಳೆಯದಕ್ಕಾಗಿ ಕಷ್ಟಗಳನ್ನು ಸಹಿಸಿಕೊಳ್ಳುವ ಅಭ್ಯಾಸವನ್ನು ನೀಡುತ್ತದೆ. ಮನುಷ್ಯ ಜಗತ್ತಿನಲ್ಲಿ ಅನೇಕ ರೀತಿಯ ಕೆಲಸಗಳನ್ನು ಮಾಡುತ್ತಾನೆ. ಅವನೂ ಕಷ್ಟಪಟ್ಟು ದುಡಿಯುತ್ತಾನೆ. ಅವನು ಅಲೆದಾಡುತ್ತಾನೆ. ಅವನು ಹರಟೆಯೂ ಸಹ ಹೊಡೆಯುತ್ತಾನೆ. ಮಾನವನ ಮನಸ್ಸು ಅಥವಾ ಅವನ ದೇಹವು ಸಂಪೂರ್ಣವಾಗಿ ಖಾಲಿಯಾಗಿ ಉಳಿಯುವುದಿಲ್ಲ, ಮನುಷ್ಯನು ಏನಾದರೂ ಕೆಲಸ ಮಾಡುತ್ತಿರುತ್ತಾನೆ. ಆದರೆ ಆ ಕೆಲಸಗಳಲ್ಲಿ ಕೆಲವು ಅಸಂಬದ್ಧ ಕೆಲಸಗಳು, ಕೆಲವು ಹಾನಿಕಾರಕ ಮತ್ತು ಕೆಲವು ಉಪಯುಕ್ತ ಮತ್ತು ಕೆಲವು ತುಂಬಾ ಒಳ್ಳೆಯ ಕೆಲಸಗಳಿರುತ್ತವೆ. ಆದರೆ ರಮಝಾನ್ ಒಬ್ಬ ವ್ಯಕ್ತಿಯನ್ನು ಎಂತಹ ಕಾರ್ಯಕ್ಕೆ ಒಗ್ಗುವಂತೆ ಮಾಡುತ್ತದೆ ಎಂದರೆ ಅದು ಅವನನ್ನು ಒಳ್ಳೆಯ ಕಾರ್ಯಗಳಲ್ಲಿ ಕಷ್ಟವನ್ನು ಸಹಿಸಿಕೊಳ್ಳುವಂತೆ ಮಾಡುತ್ತದೆ. ಮಾನವನ ಜೀವನದಲ್ಲಿ ನೆಮ್ಮದಿ ಮತ್ತು ವಿಶ್ರಾಂತಿ ಎಂದರೆ ಏನು? ಅವು ತಿನ್ನುವುದು, ಕುಡಿಯುವುದು, ಮಲಗುವುದು ಮತ್ತು ಸಂಭೋಗಿಸುವುದಾಗಿದೆ. ನಾಗರಿಕತೆಯ ಅತ್ಯುನ್ನತ ರೂಪವೆಂದರೆ ಲೈಂಗಿಕ ಸಂಭೋಗವಾಗಿದೆ, ಇದರಲ್ಲಿ ಸ್ನೇಹಿತರನ್ನು ಭೇಟಿ ಮಾಡುವುದು ಮತ್ತು ಪ್ರೀತಿಪಾತ್ರರ ಜೊತೆ ಸಂಬಂಧವನ್ನು ಒಳಗೊಂಡಿರುತ್ತದೆ. ಆದರೆ ಅತ್ಯಂತ ನಿಕಟವಾದ ಲೈಂಗಿಕ ಸಂಬಂಧವು ಎಂದರೆ ಗಂಡ ಮತ್ತು ಹೆಂಡತಿಯ ನಡುವೆ ಇರುತ್ತದೆ. ಆದ್ದರಿಂದ ಮಾನವನ ಸೌಕರ್ಯವು ಅವನು ತಿನ್ನುವ,

***(ಪುಟ ಸಂಖ್ಯೆ-10ರಲ್ಲಿ ಮುಂದುವರಿಸಲಾಗಿದೆ)***

# ಖುತ್‌ಬ ಜುಮುಅ

**ನಾವು ರಮಝ಼ಾನ್‌ನ ನಿಜವಾದ ಅನುಗ್ರಹವನ್ನು ಪಡೆಯಲು ಬಯಸಿದರೆ, ನಾವು ಪವಿತ್ರ ಖುರ್‌ಆನ್ ಅನ್ನು ಪಠಿಸಲು ಮತ್ತು ಅದರ ಬಗ್ಗೆ ಧ್ಯಾನಿಸಲು ವಿಶೇಷ ಗಮನವನ್ನು ನೀಡಬೇಕು.**

ನಾವು ಸಹ ಈ ತಿಂಗಳಲ್ಲಿ ವಿಶೇಷವಾಗಿ ಪವಿತ್ರ ಖುರ್‌ಆನ್ ಓದುವ, ಅದರ ವ್ಯಾಖ್ಯಾನವನ್ನು ಓದುವ ಮತ್ತು ಆಲಿಸುವ ಕಡೆಗೆ ವಿಶೇಷವಾದ ಗಮನವನ್ನು ನೀಡಬೇಕು. ಎಂ.ಟಿ.ಎ.ದಲ್ಲೂ ಪವಿತ್ರ ಖುರ್‌ಆನಿನ ದರ್ಸ್ ಪ್ರಸಾರವಾಗುತ್ತದೆ. ಅದನ್ನು ಸಹ ಆಲಿಸಬೇಕು.

ಪವಿತ್ರ ಖುರ್‌ಆನಿನ ಪಾರಾಯಣದ ಜೊತೆಗೆ ಅದರ ಅರ್ಥ ಮತ್ತು ವ್ಯಾಖ್ಯಾನವನ್ನು ಓದಿದರೆ ಮಾತ್ರ ನಾವು ಅದರಲ್ಲಿ ಪ್ರಸ್ತಾಪಿಸಿರುವ ಆದೇಶಗಳ ಪ್ರಾಮುಖ್ಯವನ್ನು ಮನವರಿಕೆ ಮಾಡಿಕೊಂಡು ನಮ್ಮ ಜೀವಿತದ ಭಾಗವನ್ನಾಗಿ ಮಾಡಲು ಸಾಧ್ಯ. ನಮ್ಮ ಜೀವಿತವನ್ನು ಖುರ್‌ಆನಿನ ಬೋಧನೆಗಳ ಪ್ರಕಾರ ಅಳವಡಿಸಬಹುದಾಗಿದೆ ಮತ್ತು ಅಲ್ಲಾಹನ ಕೃಪೆಗಳನ್ನು ಹೀರಿಕೊಳ್ಳುವವರಾಗಬಹುದಾಗಿದೆ.

**ಪವಿತ್ರ ಖುರ್‌ಆನ್ ಶಾಶ್ವತ ಕಾನೂನಾಗಿದೆ**

ಹಝ಼್ರತ್ ಪೈಗಂಬರ್(ಸ)ರಲ್ಲಿ ಶರೀಅತ್ ಮತ್ತು ಪ್ರವಾದಿತ್ವ ಕೊನೆಗೊಂಡಿದೆ. ಈಗ ಯಾವುದೇ ಶರೀಅತ್ ಬರದು. ಪವಿತ್ರ ಖುರ್‌ಆನ್ ಖ಼ಾತಮುಲ್ ಕುತುಬ್ ಆಗಿದೆ. ಅದರಲ್ಲಿ ಈಗ ಒಂದು ಚುಕ್ಕಿಯನ್ನು ಹೆಚ್ಚು ಕಮ್ಮಿ ಮಾಡಲು ಎಡೆಯಿಲ್ಲ. ಹಝ಼್ರತ್ ಪೈಗಂಬರ್(ಸ)ರ ವರದಾನಗಳು, ಅನುಗ್ರಹಗಳು ಮತ್ತು ಪವಿತ್ರ ಖುರ್‌ಆನಿನ ಅಧ್ಯಾಪನೆ ಹಾಗೂ ಮಾರ್ಗದರ್ಶನಗಳ ಫಲಗಳು ಕೊನೆಗೊಂಡಿಲ್ಲ. ಅವುಗಳು ಪ್ರತಿ ಕಾಲಕ್ಕೂ ತಾಜಾವಾಗಿ ಇವೆ. ಆ ವರದಾನಗಳಿಗೆ ಮತ್ತು ಅನುಗ್ರಹಗಳಿಗೆ ಪುರಾವೆಯಾಗಿ ಅಲ್ಲಾಹನು ನನ್ನನ್ನು ಎಬ್ಬಿಸಿ ನಿಲ್ಲಿಸಿದ್ದಾನೆ.

**ಪವಿತ್ರ ಖುರ್‌ಆನ್ ಜ್ಞಾನ ಭಂಡಾರವಾಗಿದೆ**

ಪವಿತ್ರ ಖುರ್‌ಆನ್ ಜ್ಞಾನ ಮತ್ತು ಸ್ಥಾಯಿಯಾದ ನಿಯಮಸಂಹಿತೆಯಾಗಿದೆ. ಅದು ಸಕಲ ಬೋಧನೆಗಳ ಭಂಡಾರವಾಗಿದೆ. ಈ ರೀತಿಯಾಗಿ ಪವಿತ್ರ ಖುರ್‌ಆನಿನ ಮೊದಲ ಶ್ರೇಷ್ಠತೆಯು ಅದರ ಉನ್ನತ ಮಟ್ಟದ ಅಧ್ಯಾಪನೆಯಾಗಿದೆ. ಅದರ ಎರಡನೇ ಶ್ರೇಷ್ಠತೆ ಅದರ ಮಹತ್ತಾದ ಭವಿಷ್ಯವಾಣಿಯಾಗಿವೆ. ಹಝ಼್ರತ್ ಪೈಗಂಬರ್(ಸ)ರ ಪೂರ್ತಿ ಮಕ್ಕಾ ಜೀವನ ಭವಿಷ್ಯವಾಣಿಗಳಿಂದ ತುಂಬಿವೆ. (ಹಝ಼್ರತ್ ಮಸೀಹ್ ಮೌಊದ(ಅ))

**ಪವಿತ್ರ ಖುರ್‌ಆನ್ ಒಂದು ಸುರಕ್ಷಿತ ಗ್ರಂಥವಾಗಿದೆ.**

ಪವಿತ್ರ ಖುರ್‌ಆನಿನ ಹೆಸರು ಝಿಕರ್ ಎಂದು ಕರೆಯಲಾಗಿದೆ. ಇದಕ್ಕೆ ಕಾರಣವೇನೆಂದರೆ ಮನುಷ್ಯನ ಆಂತರಿಕ ಶರಿಯತ್ (ಧರ್ಮನಿಯಮಗಳು) ಸ್ಮರಣೆಗೆ ತರುವುದಾಗಿದೆ. ಖುರ್‌ಆನ್ ಹೊಸದಾದ ಯಾವ ಶಿಕ್ಷಣವನ್ನು ತಂದಿಲ್ಲ ಬದಲಾಗಿ ಮನುಷ್ಯನ ಅಂತರಂಗದಲ್ಲಿರುವ ಸ್ವಾಭಾವಿಕ ಗುಣಗಳ ಶಕ್ತಿಗಳನ್ನು ಒಳಗೊಂಡಿದೆ. ಹೀಗೆ ಪವಿತ್ರ ಖುರ್‌ಆನ್ ಮಾನವನಲ್ಲಿ ಹುದಿಗಿರುವ ಶಕ್ತಿ ಗುಣಗಳನ್ನು ಸ್ಮರಣೆಗೆ ತಂದಿದೆ.

**ಒಟ್ಟಿನಲ್ಲಿ ಅಲ್ಲಾಹನು ಖುರ್‌ಆನನ್ನು ಕಳುಹಿಸಿ ಮನುಷ್ಯನಿಗೆ ತನ್ನ ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸಲು, ಸಾಕ್ಷ್ಯಗಳನ್ನು ತಿಳಿದುಕೊಳ್ಳಲು ಒಂದು ಅದ್ಭುತವಾದ ಪವಾಡ ಗ್ರಂಥವನ್ನು ನೀಡಿದ್ದಾನೆ.**

ನಾವು ರಮಝ಼ಾನಿನಲ್ಲೂ ನಂತರವೂ ಪವಿತ್ರ ಖುರ್‌ಆನನ್ನು ಮನವರಿಕೆ ಮಾಡುವಂತಾಗಲು, ಕಲಿಯುವಂತಾಗಲು ಮತ್ತು ಅದರ ಪ್ರಕಾರ ನಡೆಯುವಂತಾಗಲು ನಮಗೆ ಸೌಭಾಗ್ಯ ನೀಡಲಿ.

ಮೂರು ದಿವಂಗತರಾದ ಮೌಲಾನ ಮುನವ್ವರ್ ಅಹ್ಮದ್ ಖುರ್ಷಿದ್ ಸಾಹಿಬ್, ಮಾನ್ಯ ಇಕ್ಬಾಲ್ ಅಹ್ಮದ್ ಮುನೀರ್ ಸಾಹಿಬ್ ಹಾಗೂ ಖಾದಿಯಾನಿನ ದರ್ವೇಶಾದ ಮಿಯಾ ಅಬ್ದುಲ್ ಅಝೀಮ್‌ರ ಪತ್ನಿಯಾದ ಸಯ್ಯದ ನುಸ್ರತ್ ಜಹಾನ್ ಬೇಗಂ ಸಾಹಿಬರವರ  ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝು ಜನಾಝು ಗಾಯಿಬ್ ನಿರ್ವಹಣೆ

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ಼್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **31–03–2023** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಈಗ ನಾವು ರಮಝ಼ಾನ್ ಮಾಸವನ್ನು ದಾಟುತ್ತಿದ್ದೇವೆ. ಇದು ಒಂದು ಆಧ್ಯಾತ್ಮಿಕ ವಾತಾವರಣ ಉಂಟಾಗುವಂತಹ ತಿಂಗಳಾಗಿದೆ. ಉಪವಾಸದೊಂದಿಗೆ ಆರಾಧನೆಯ ಕಡೆಗೆ ಹೆಚ್ಚಿನ ಗಮನವಿರುತ್ತದೆ. ಪವಿತ್ರ ಖುರ್‌ಆನ್ ಓದುವ ಮತ್ತು ಆಲಿಸುವ ಬಗ್ಗೆ ಗಮನವಿರುತ್ತದೆ. ವ್ರತಾನುಷ್ಠಾನದಿಂದ ಯಥಾರ್ಥವಾದ ಪ್ರಯೋಜನವನ್ನು ಪಡೆಯಬೇಕಾದರೆ ಪವಿತ್ರ ಖುರ್‌ಆನ್ ಓದುವ ಕಡೆಗೆ ಹೆಚ್ಚಿನ ಗಮನವಿರಬೇಕು. ರಮಝ಼ಾನಿಗೆ ಪವಿತ್ರ ಖುರ್‌ಆನಿನೊಂದಿಗೆ ವಿಶಿಷ್ಟವಾದ ಸಂಬಂಧವಿದೆ. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೇಳುತ್ತಾನೆ: **ಶಹರು ರಮಝಾನಲ್ಲಝೀ ಉನ್‌ಝಿಲ ಫೀಹಿಲ್ ಖುರ್‌ಆನು ಹುದಲ್ಲಿನ್ನಾಸಿ ವ ಬೈಯಿನಾತಿಮ್ಮಿನಲ್ ಹುದಾ ವಲ್ ಫುರ್ಖಾನ್**– (ಅಲ್‌ಬಖರ:186) ಎಂದರೆ, ಸಕಲ ಮಾನವರಿಗೆ ಸನ್ಮಾರ್ಗದರ್ಶಕವಾದ ಖುರ್‌ಆನ್ ಅವತೀರ್ಣವಾದ ಮಾಸವಾಗಿದೆ ರಮಝಾನ್.

ರಮಝ಼ಾನ್ 24ರಂದು ಹಝ಼್ರತ್ ಪೈಗಂಬರ್(ಸ)ರಿಗೆ ಮೊದಲ

ದಿವ್ಯವಾಣಿ ಅವತೀರ್ಣವಾಯಿತು ಎಂದು ಕೆಲವು ಪ್ರಬಲ ವರದಿಗಳು ಹೇಳುತ್ತಿವೆ. (ಸುನನ್ ಅಲ್‌ಕುಬ್ರಾ ಲಿಲ್ ಬೈಹಖಿ ಕಿತಾಬುಲ್ ಜಝ್ಯ, ಸಂಪುಟ–9, ಪುಟ–317, ಹದೀಸ್–18649, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2003) (ಅಲ್‌ಇತ್ತಿಫಾಖ್ ಫೀ ಉಲೂಮಿಲ್ ಖುರ್‌ಆನ್(ಅನುವಾದ), ಸಂಪುಟ–1, ಪುಟ–122, ಮಕ್ತಬ ಅಲ್‌ಇಲ್ಮ್ ಲಾಹೋರ್)

ಪ್ರತಿ ರಮಝಾನಿನಲ್ಲಿ ಜಿಬ್ರೀಲ್(ಅ) ಹಝ್ರತ್ ಪೈಗಂಬರ್(ಸ)ರೊಂದಿಗೆ ಪೂರ್ತಿ ಪವಿತ್ರ ಖುರ್‌ಆನನ್ನು ಒಂದು ಬಾರಿ ಓದಿ ಮುಗಿಸುತ್ತಿದ್ದರು ಮತ್ತು ಹಝ್ರತ್ ಪೈಗಂಬರ್(ಸ)ರ ಜೀವಿತದ ಕೊನೆಯ ರಮಝಾನಿನಲ್ಲಿ ಎರಡು ಬಾರಿ ಓದಿ ಮುಗಿಸಲಾಗಿತ್ತು. (ಸಹೀಹ್ ಬುಖಾರಿ ಕಿತಾಬ್ ಫಝಾಎಲುಲ್ ಖುರ್‌ಆನ್, ಬಾಬ್ ಕಾನ ಜಿಬ್ರೀಲ್ ಯಅ್‌ರಿಝುಲ್ ಖುರ್‌ಆನ ಅಲನ್ನಬೀ(ಸ), ಹದೀಸ್–4998)

ನಾವು ಸಹ ಈ ತಿಂಗಳಲ್ಲಿ ವಿಶೇಷವಾಗಿ ಪವಿತ್ರ ಖುರ್‌ಆನ್ ಓದುವ, ಅದರ ವ್ಯಾಖ್ಯಾನವನ್ನು ಓದುವ ಮತ್ತು ಆಲಿಸುವ ಕಡೆಗೆ ವಿಶೇಷವಾದ ಗಮನವನ್ನು ನೀಡಬೇಕು. ಎಂ.ಟಿ.ಎ.ದಲ್ಲೂ ಪವಿತ್ರ ಖುರ್‌ಆನಿನ ದರ್ಸ್ ಪ್ರಸಾರವಾಗುತ್ತದೆ. ಅದನ್ನು ಸಹ ಆಲಿಸಬೇಕು.

ಪವಿತ್ರ ಖುರ್‌ಆನಿನ ಪಾರಾಯಣದ ಜೊತೆಗೆ ಅದರ ಅರ್ಥ ಮತ್ತು ವ್ಯಾಖ್ಯಾನವನ್ನು ಓದಿದರೆ ಮಾತ್ರ ನಾವು ಅದರಲ್ಲಿ ಪ್ರಸ್ತಾಪಿಸಿರುವ ಆದೇಶಗಳ ಪ್ರಾಮುಖ್ಯವನ್ನು ಮನವರಿಕೆ ಮಾಡಿಕೊಂಡು ನಮ್ಮ ಜೀವಿತದ ಭಾಗವನ್ನಾಗಿ ಮಾಡಲು ಸಾಧ್ಯ. ನಮ್ಮ ಜೀವಿತವನ್ನು ಖುರ್‌ಆನಿನ ಬೋಧನೆಗಳ ಪ್ರಕಾರ ಅಳವಡಿಸಬಹುದಾಗಿದೆ ಮತ್ತು ಅಲ್ಲಾಹನ ಕೃಪೆಗಳನ್ನು ಹೀರಿಕೊಳ್ಳುವವರಾಗಬಹುದಾಗಿದೆ.

ಆದ್ದರಿಂದ, ನಾವು ರಮಝಾನ್‌ನ ನಿಜವಾದ ಅನುಗ್ರಹವನ್ನು ಪಡೆಯಲು ಬಯಸಿದರೆ, ನಾವು ಪವಿತ್ರ ಖುರ್‌ಆನ್ ಅನ್ನು ಪಠಿಸಲು ಮತ್ತು ಅದರ ಬಗ್ಗೆ ಧ್ಯಾನಿಸಲು ವಿಶೇಷ ಗಮನವನ್ನು ನೀಡಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪವಿತ್ರ ಖುರ್‌ಆನ್‌ನ ಮಹತ್ವ, ಅದರ ಸದ್ಗುಣಗಳು ಮತ್ತು ಅದರ ಸ್ಪಷ್ಟ ವಾದಗಳ ಬಗ್ಗೆ ನಮಗೆ ಬಹಿರಂಗವಾಗಿ ಹೇಳಿದ್ದಾರೆ. ಕೆಲವು ಸಮಯದಿಂದ, ನಾನು ನನ್ನ ಖುತುಬಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಇದರ ಕುರಿತು ವಿವಿಧ ಅಧ್ಯಾಪನೆಗಳನ್ನು ಉಲ್ಲೇಖಿಸುತ್ತಿದ್ದೇನೆ. ಅವುಗಳನ್ನು ಮತ್ತೆ ಮತ್ತೆ ಆಲಿಸಬೇಕು, ಓದಬೇಕು ಮತ್ತು ಆಲೋಚಿಸಬೇಕಾಗಿದೆ, ಇದರಿಂದ ನಮ್ಮಲ್ಲಿ ಅದರ ಬಗ್ಗೆ ಸರಿಯಾದ ತಿಳುವಳಿಕೆಯನ್ನು ಬೆಳೆಸಿಕೊಳ್ಳಬಹುದು.

ಇಂದೂ ಸಹ ನಾನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳಿಗೆ ಸಂಬಂಧಿಸಿದಂತೆ ಕೆಲವು ಉಲ್ಲೇಖಗಳನ್ನು ಪ್ರಸ್ತುತಪಡಿಸುತ್ತೇನೆ. ಪವಿತ್ರ ಖುರ್‌ಆನ್ ಶಾಶ್ವತ ಕಾನೂನಾಗಿದೆ ಎಂದು ಘೋಷಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ,ಅಲ್ಲಾಹನ ಕಾರ್ಯನೀತಿಗಳ ಮತ್ತು ಆದೇಶಗಳ ಎರಡು ವಿಧಗಳಿವೆ. ಕೆಲವು ಸ್ಥಿರ ಮತ್ತು ಸದಾಕಾಲಕ್ಕೆ ಆಗಿರುತ್ತವೆ. ಕೆಲವು ತಾತ್ಕಾಲಿಕ ಆವಶ್ಯಕತೆಗಳಿಗೆ ಅನುಸಾರವಾಗಿ ನೀಡಲಾಗಿರುತ್ತವೆ. ಅವುಗಳಲ್ಲೂ ಒಂದು ಸ್ಥಿರತೆ ಇದೆ ಎಂಬುದು ಬೇರೆ ವಿಷಯ. ಉದಾಹರಣೆಗೆ ಯಾತ್ರೆಯಲ್ಲಿ ನಮಾಝ್ ಮತ್ತು ಉಪವಾಸಗಳ ಕುರಿತು ಇರುವ ಆದೇಶಗಳು ಬೇರೆ. ಯಾತ್ರೆಯಲ್ಲಿರದ ಸ್ಥಿತಿಯಲ್ಲಿ ಇರುವ ಆದೇಶಗಳು ಬೇರೆ. ಯಾತ್ರೆಯಲ್ಲಿ ನಮಾಝ್ ಜಮಅ್ ಅಥವಾ ಖಸರ್ ಮಾಡಲು ಅನುಮತಿಯಿದೆ. ಆದರೆ ಸಾಧಾರಣ ಅವಸ್ಥೆಗಳಲ್ಲಿ ಪೂರ್ತಿಯಾಗಿ ನಿರ್ವಹಿಸಬೇಕಾಗಿದೆ. ಅದೇ ರೀತಿಯಲ್ಲಿ, ಪ್ರಯಾಣದ ಸಮಯದಲ್ಲಿ ಉಪವಾಸವನ್ನು ಇಡುವುದಿಲ್ಲ. ಸಾಮಾನ್ಯ ಸಂದರ್ಭಗಳಲ್ಲಿ, ಉಳಿದಿರುವಾಗ ಉಪವಾಸವು ಪ್ರತಿಯೊಬ್ಬ ಆರೋಗ್ಯವಂತ ವ್ಯಕ್ತಿಗೆ ಕಡ್ಡಾಯವಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಅವರು ಹೇಳಿದರು, ಉದಾಹರಣೆಗೆ, ಇನ್ನೊಂದು ತೀರ್ಪು ಇದೆ "ಮಹಿಳೆಯು ಹೊರಗೆ ಹೋದಾಗ ಅವಳು ಬುರ್ಖಾವನ್ನು ಧರಿಸುತ್ತಾಳೆ." ಈ ಆಜ್ಞೆಯು ಮಹಿಳೆಯರಿಗೆ ವಿಶೇಷ ಪರಿಸ್ಥಿತಿಯಲ್ಲಿರುವ ತೀರ್ಪಾಗಿದೆ. "ಮನೆಯ ಒಳಗೆ ಬುರ್ಖಾ ಧರಿಸಿಕೊಂಡಿರುವ ಅವಶ್ಯಕತೆ ಇಲ್ಲ." ಪರದೆಯ ಆಜ್ಞೆಯು ಮನೆಯ ಹೊರಗೆ ಇದೆ. ಮತ್ತು ಯಾರಿಂದ ಪರದೆ ಮಾಡಬೇಕು ಮಾಡಬಾರದು ಎಂಬುದು ಒಂದು ವಿಷಯವಾಗಿದೆ. ನಂತರ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ, "... ತೌರಾತ್ ಮತ್ತು ಇಂಜೀಲಿನ ಆಜ್ಞೆಗಳು ತಾತ್ಕಾಲಿಕ ಆವಶ್ಯಕತೆಗಳಿಗೆ ಅನುಸಾರವಾಗಿದ್ದುವು. ಹಝ್ರತ್ ಪೈಗಂಬರ್(ಸ) ತಂದ ಶರೀಅತ್ ಮತ್ತು ಗ್ರಂಥವು ಸ್ಥಿರ ಮತ್ತು ಶಾಶ್ವತವಾದ ಶರೀಅತ್ ಆಗಿದೆ. ಇದರಲ್ಲಿ ಪ್ರಸ್ತಾಪಿಸಲಾಗಿರುವ ಸಂಗತಿಗಳು ಸಮಗ್ರ ಮತ್ತು ಸಂಪೂರ್ಣವಾಗಿವೆ. ಪವಿತ್ರ ಖುರ್‌ಆನ್ ಸ್ಥಾಯಿಯಾದ ಕಾನೂನಾಗಿದೆ. ಪವಿತ್ರ ಖುರ್‌ಆನ್ ಅವತೀರ್ಣವಾಗಿರದಿದ್ದರೂ ತೌರಾತ್ ಮತ್ತು ಇಂಜೀಲ್ ರದ್ದಾಗುತ್ತಿದ್ದುವು. ಏಕೆಂದರೆ ಅವುಗಳು ಸ್ಥಿರ ಮತ್ತು ಸ್ಥಾಯಿಯಾದ ನಿಯಮವಾಗಿರಲಿಲ್ಲ. ಆದರೆ ಪವಿತ್ರ ಖುರ್‌ಆನಿನ ಅಧ್ಯಾಪನೆ ಸಂಪೂರ್ಣ ಮತ್ತು ಅದರ ಆದೇಶಗಳು ಮತ್ತು ಮಾರ್ಗದರ್ಶನಗಳು ಎಲ್ಲ ಕಾಲಗಳಿಗೆ ಆಗಿವೆ. (ಮಲ್‌ಫೂಝಾತ್, ಸಂಪುಟ–3, ಪುಟ–42, 1984)

ಆದ್ದರಿಂದ, ಪವಿತ್ರ ಖುರ್‌ಆನ್‌ನ ಪ್ರಾಮುಖ್ಯತೆ, ಪವಿತ್ರ ಖುರ್‌ಆನ್‌ನ ಸೂಚನೆಗಳು ಎಲ್ಲಾ ರೀತಿಯ ಸನ್ನಿವೇಶಗಳಿಗೆ ಸೂಕ್ತವಾಗಿದೆ, ಇದು ಉತ್ತಮವಾದ ಸಂಪೂರ್ಣ ಶಿಕ್ಷಣವಾಗಿದೆ ಮತ್ತು ಇದು ಎಲ್ಲಾ ಕಾಲಕ್ಕೂ ಆಗಿದೆ. ಉದಾಹರಣೆಗೆ ಪರದೆಯ ನಿರ್ದಶನವನ್ನು ಆಕ್ಷೇಪಿಸುವವರೂ ಆಕ್ಷೇಪಿಸುತ್ತಾರೆ, ಈ ಕಾಲದ ದೃಷ್ಟಿಯಿಂದ ಪರದೆಯ ಅವಶ್ಯಕತೆ ಇಲ್ಲ ಮತ್ತು ಕೆಲವೊಮ್ಮೆ ನಮ್ಮ ಹುಡುಗಿಯರು ಸಹ ಇದರಿಂದ ಪ್ರಭಾವಿತರಾಗುತ್ತಾರೆ. ಆದರೆ ಈ ಜನರು ಅದನ್ನು ಸ್ವತಃ ಒಪ್ಪಿಕೊಳ್ಳುತ್ತಿದ್ದಾರೆ. ಇದರ ಬಗ್ಗೆ ದೊಡ್ಡ ಲೇಖನಗಳನ್ನು ಬರೆಯಲಾಗುತ್ತದೆ, ಅಂದರೆ ಮಹಿಳಾ ಸಂಘಟನೆಗಳೂ ಸಹ ಈಗ ಗಲಾಟೆ ಮಾಡಲು ಪ್ರಾರಂಭಿಸಿದ್ದಾರೆ. ಕೆಲವೊಮ್ಮೆ ಪತ್ರಿಕೆಗಳಲ್ಲಿ ಮಹಿಳೆಯರ ಮತ್ತು ಪುರುಷರ ಮಿಶ್ರಣವು ಕೆಲವೊಮ್ಮೆ ದೊಡ್ಡ ದೊಡ್ಡ ಸಮಸ್ಯೆಗಳನ್ನು ಸೃಷ್ಟಿಸುತ್ತಿದೆ ಮತ್ತು ಇದಕ್ಕಾಗಿ ಕೆಲವರು ಪ್ರತ್ಯೇಕ ವ್ಯವಸ್ಥೆ ಇರಬೇಕು ಎಂದು ಯೋಚಿಸಲು ಪ್ರಾರಂಭಿಸಿದ್ದಾರೆ.

ತನ್ನ ಬರುವಿಕೆಯ ಉದ್ದೇಶ ಮತ್ತು ಪವಿತ್ರ ಖುರ್‌ಆನ್ ಪರಿಪೂರ್ಣವಾದ ನಿಯಮಸಂಹಿತೆ ಎಂಬುದರ ಬಗ್ಗೆ ಹೀಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ನನ್ನ ಆಗಮನದ ಪರಮೋದ್ದೇಶ ಇಸ್ಲಾಮಿಗೆ ಪುನರುಜ್ಜೀವನ ಮತ್ತು ನೆರವು ನೀಡುವುದಾಗಿದೆ. ಹಝ್ರತ್ ಪೈಗಂಬರ್(ಸ)ರಲ್ಲಿ ಶರೀಅತ್ ಮತ್ತು ಪ್ರವಾದಿತ್ವ ಕೊನೆಗೊಂಡಿದೆ. ಈಗ ಯಾವುದೇ ಶರೀಅತ್ ಬರದು. ಪವಿತ್ರ ಖುರ್‌ಆನ್ ಖಾತಮುಲ್ ಕುತುಬ್ ಆಗಿದೆ. ಅದರಲ್ಲಿ ಈಗ ಒಂದು ಚುಕ್ಕಿಯನ್ನು ಹೆಚ್ಚು ಕಮ್ಮಿ ಮಾಡಲು ಎಡೆಯಿಲ್ಲ. ಹಝ್ರತ್ ಪೈಗಂಬರ್(ಸ)ರ ವರದಾನಗಳು, ಅನುಗ್ರಹಗಳು ಮತ್ತು ಪವಿತ್ರ ಖುರ್‌ಆನಿನ ಅಧ್ಯಾಪನೆ ಹಾಗೂ ಮಾರ್ಗದರ್ಶನಗಳ ಫಲಗಳು ಕೊನೆಗೊಂಡಿಲ್ಲ. ಅವುಗಳು ಪ್ರತಿ ಕಾಲಕ್ಕೂ ತಾಜಾವಾಗಿ ಇವೆ. ಆ ವರದಾನಗಳಿಗೆ ಮತ್ತು ಅನುಗ್ರಹಗಳಿಗೆ ಪುರಾವೆಯಾಗಿ ಅಲ್ಲಾಹನು ನನ್ನನ್ನು ಎಬ್ಬಿಸಿ ನಿಲ್ಲಿಸಿದ್ದಾನೆ. (ಮಲ್‌ಫೂಝಾತ್, ಸಂಪುಟ–8, ಪುಟ–245, 1984) ಅಂದರೆ ಪವಿತ್ರ ಖುರ್‌ಆನ್‌ನ ಬೋಧನೆಗಳನ್ನು ಅರ್ಥಮಾಡಿಕೊಳ್ಳಲು ಎಲ್ಲರಿಗು ಸಾಧ್ಯವಿಲ್ಲ. ವ್ಯಾಖ್ಯಾನದ ಅಗತ್ಯವಿರುವ ಕೆಲವು ವಿಷಯಗಳಿವೆ ಅದನ್ನು ವಿವರಿಸಲು ಈ ಕೊನೆಯ ಯುಗದಲ್ಲಿ, ಸರ್ವಶಕ್ತನಾದ ಅಲ್ಲಾಹನು ನನ್ನನ್ನು ಕಳುಹಿಸಿದ್ದಾನೆ.

ಮತ್ತೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: "ಪವಿತ್ರ ಖುರ್‌ಆನ್ ಎಂತಹ ಪವಾಡವಾಗಿದೆ ಎಂದರೆ ಅದು ಹಿಂದೆಂದೂ ಸಂಭವಿಸಿಲ್ಲ, ಮತ್ತೆಂದೂ ಸಂಭವಿಸುವುದಿಲ್ಲ." "ಅದರ ಔದಾರ್ಯದ ಮತ್ತು ಅನುಗ್ರಹಗಳು ಯಾವಾಗಲೂ ನಡೆಯುತ್ತವೆ ಮತ್ತು ಅದು ರಸೂಲುಲ್ಲಾಹ್(ಸ) ಅವರ ಸಮಯದಲ್ಲಿ ಇದ್ದಂತೆ ಪ್ರತಿ ಯುಗದಲ್ಲೂ ಪ್ರಮುಖ ಮತ್ತು ಪ್ರಕಾಶಮಾನವಾಗಿದೆ. ಇದಲ್ಲದೆ, ಪ್ರತಿಯೊಬ್ಬ ವ್ಯಕ್ತಿಯ ಮಾತು ಅವನ ಧೈರ್ಯಕ್ಕೆ ಅನುಗುಣವಾಗಿದೆ, ಅವನ ಧೈರ್ಯ, ದೃಢತೆ ಮತ್ತು ಗುರಿಗಳು ಎಷ್ಟು ಎತ್ತರದಲ್ಲಿರುತ್ತವೆ, ಅದು ಆ ಮಾತಿಗೆ ಆಧಾರವಾಗಿರುತ್ತದೆ ಮತ್ತು ಅದೇ ಬಣ್ಣವು ದೈವವಾಣಿಯಲ್ಲಿದೆ ಎಂದು ನೆನಪಿನಲ್ಲಿಡಬೇಕು. ಸಾಮಾನ್ಯ ಮನುಷ್ಯನು ತನ್ನ ಜ್ಞಾನಕ್ಕೆ ಅನುಗುಣವಾಗಿ ಮಾತನಾಡುವಂತೆಯೇ, ದೈವವಾಣಿಗೂ ಸ್ಥಾನವಿದೆ. "ಅಲ್ಲಾಹನ ವಾಣಿಯು ಯಾರ ಮೇಲೆ ಅವತೀರ್ಣವಾಗುತ್ತದೆಯೋ, ಅವನು ಎಷ್ಟು ಧೈರ್ಯಶಾಲಿಯಾಗಿರುತ್ತಾನೊ ಅಷ್ಟೇ ಪ್ರಮಾಣದ ದೈವವಾಣಿಯನ್ನು ಸ್ವೀಕರಿಸುತ್ತಾನರ." ಇಲ್ಲಿ ದೈವವಾಣಿಯ ಸ್ಥಾನ ಹಾಗೂ ಸರ್ವಶಕ್ತನಾದ ಅಲ್ಲಾಹನ ಸಂದೇಶದ ಮಟ್ಟವು ಇದೆ ಎಂಬುದು ನೆನಪಿನಲ್ಲಿಡಬೇಕು. ಮತ್ತೆ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ರಸೂಲುಲ್ಲಾಹ್(ಸ) ಅವರ ಧೈರ್ಯ, ಸಾಮರ್ಥ್ಯ ಮತ್ತು ದೃಢಸಂಕಲ್ಪದ ವ್ಯಾಪ್ತಿ ಬಹಳ ವಿಸ್ತಾರವಾಗಿರುವುದರಿಂದ ನಿಮಗೆ ನೀಡಲಾದ ವಾಣಿ (ಪವಿತ್ರ ಖುರ್‌ಆನ್)ಯು ಎಂತಹ ಮಟ್ಟ ಮತ್ತು ಶ್ರೇಣಿಯನ್ನು ಹೊಂದಿದೆ ಎಂದರೆ ಅಂತಹ ಧೈರ್ಯ ಮತ್ತೊಬ್ಬ ವ್ಯಕ್ತಿ ಎಂದಿಗೂ ಹೊಂದಿರುವುದಿಲ್ಲ." (ಮಲ್‌ಫೂಝಾತ್, ಸಂಪುಟ–3, ಪುಟ–57, 1984)

ಮತ್ತೆ ಹಝ್ರತ್ ಮಸೀಹ್ ಮವೂದ್(ಅ) ಹೇಳಿದರು, "ಪವಿತ್ರ ಖುರ್‌ಆನ್‌ನ ಬೋಧನೆಗಳ ವ್ಯಾಪ್ತಿ ಬಹಳ ವಿಶಾಲವಾಗಿದೆ. ಇದು ಪುನರುತ್ಥಾನದ ದಿನದವರೆಗೆ ಅದೇ ಬದಲಾಗದ ಕಾನೂನು ಮತ್ತು ಪ್ರತಿ ಸಮುದಾಯಕ್ಕೆ ಮತ್ತು ಪ್ರತಿ ಸಮಯಕ್ಕೆ ಇದೆ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನು ನುಡಿಯುತ್ತಾನೆ: **ವಿನ್ ಮಿನ್ ಶೈಯಿನ್ ಇಲ್ಲಾ ಇಂದನಾ**

**ಖಝ್ಞಾಇನುಹೂ ವಮಾ ನುನಝ್ಝಿಲುಹೂ ಇಲ್ಲಾ ಬಿಖದರಿಮ್ಮಾಲೂಮ್** (ಅಲ್‌ಹಿಜ್ರ್:22) ಅಂದರೆ: ಯಾವುದೇ ವಸ್ತುವಿನ ಭಂಡಾರ ನಮ್ಮ ಬಳಿ ಇಲ್ಲದಿರುವುದಿಲ್ಲ. ಆದರೆ ನಿರ್ದಿಷ್ಟ ಪ್ರಮಾಣದಲ್ಲಿ ಹೊರತು ನಾವು ಅದನ್ನು ಒದಗಿಸುವುದಿಲ್ಲ. ಅವರು ಹೇಳಿದರು: "ತೌರಾತ್‌ನ ಅವಶ್ಯಕತೆಯು ಕೇವಲ ಅಷ್ಟೇ ಪ್ರಮಾಣದಲ್ಲಿತ್ತು ಆದ್ದರಿಂದ ಇಂಜೀಲ್‌ನ ಸಾರಾಂಶವು ಒಂದು ಪುಟದಲ್ಲಿ (ಕೇವಲ) ಬರಬಹುದು ಆದರೆ ಪವಿತ್ರ ಖುರ್‌ಆನ್‌ನ ಅಗತ್ಯತೆಗಳು ಎಲ್ಲಾ ಕಾಲದ ಸುಧಾರಣೆಯಾಗಿತ್ತು. ಪವಿತ್ರ ಖುರ್‌ಆನ್‌ನ ಉದ್ದೇಶವು ಮಾನವನನ್ನು ಅನಾಗರಿಕ ಸ್ಥಿತಿಯಿಂದ ಹೊರತರುವುದು, ಮಾನವ ನಡವಳಿಕೆಯಿಂದ ಸುಸಂಸ್ಕೃತ ವ್ಯಕ್ತಿಯನ್ನಾಗಿ ಮಾಡುವುದಾಗಿತ್ತು. ಶರೀಯತ್ ಮಿತಿಗಳು ಮತ್ತು ನಿಯಮಗಳೊಂದಿಗೆ ವೇದಿಕೆಯನ್ನು ಹೊಂದಿಸಬೇಕು. ತದನಂತರ ಮಾನವನನ್ನು ದೈಔಭಕ್ತನನ್ನಾಗಿ ಮಾಡುವುದಾಗಿತ್ತು. ಈ ಪದಗಳು ಚಿಕ್ಕದಾಗಿದ್ದರೂ ಅದರಲ್ಲಿ ಸಾವಿರಾರು ಭಾಗಗಳಿವೆ. ಯಹೂದಿಗಳು, ಭೌತಶಾಸ್ತ್ರಜ್ಞರು, ಅಗ್ನಿ ಆರಾಧಕರು ಮತ್ತು ವಿವಿಧ ಸಮೂದಾಯಗಳಲ್ಲಿ ವಾಮಾಚಾರದ ಮನೋಭಾವವು ಕಾರ್ಯನಿರ್ವಹಿಸುತ್ತಿದ್ದರಿಂದ, ಅಲ್ಲಾಹನಿಂದ ಅರಿವು ಗಳಿಸಿಕೊಂಡು ಹಝ್ರತ್ ಪೈಗಂಬರ್(ಸ) ಎಲ್ಲರನ್ನು ಸಂಬೋಧಿಸಿ ಹೀಗೆ ಹೇಳಿದರು: **ಯಾ ಅಯ್ಯುಹನ್ನಾಸು ಇನ್ನೀ ರಸೂಲುಲ್ಲಾಹಿ ಇಲೈಕುಮ್ ಜಮೀಅ** (ಅಲ್‌ಅಅ್‌ರಾಫ್:159) ಹೇಳು: 'ಎಲೈ ಮನುಷ್ಯರೇ, ದಿಟವಾಗಿಯೂ ನಾನು ನಿಮ್ಮೆಲ್ಲರೆಡೆಗೆ ಅಲ್ಲಾಹನ ಸಂದೇಶವಾಹಕನಾಗಿ ನಿಯೋಜಿತನಾಗಿದ್ದೇನೆ.' ಆದ್ದರಿಂದ ವಿವಿಧ ಸಮಯಗಳಲ್ಲಿ ಜಾರಿಯಲ್ಲಿದ್ದ ಮತ್ತು ಅನೇಕ ಪ್ರವಾದಿಗಳ ಮೂಲಕ ಆಕಾಶದಿಂದ ಭೂಮಿಯ ನಿವಾಸಿಗಳಿಗೆ ತಲುಪಿಸಲಾದ ಎಲ್ಲ ಸತ್ಯಗಳನ್ನು ಪವಿತ್ರ ಖುರ್‌ಆನ್ ಒಳಗೊಂಡಿರುವುದು ಅಗತ್ಯವಾಗಿತ್ತು. ಪವಿತ್ರ ಖುರ್‌ಆನಿನ ಮುಂದೆ ನಿರ್ಧಿಷ್ಟ ಸಮುದಾಯ, ದೇಶ ಮತ್ತು ಕಾಲಕ್ಕೆ ಬದಲಾಗಿ ಸಕಲ ಮಾನವ ಕುಲವಿತ್ತು. ಮತ್ತು ಇಂಜೀಲ್‌ನ ಪ್ರಕಾರ, ಒಂದು ನಿರ್ದಿಷ್ಟ ಸಮೂದಾಯ (ಕೇವಲ) ಇತ್ತು, ಅದಕ್ಕಾಗಿಯೇ ಈಸ ಮಸೀಹರು(ಅ) "ನಾನು ಇಸ್ರಾಈಲ್‌ನ ಕಳೆದುಹೋದ ಮೆಕೆಗಳನ್ನು ಹುಡುಕಲು ಬಂದಿದ್ದೇನೆ" ಎಂದು ಪದೇ ಪದೇ ಹೇಳಿದರು." (ಮಲ್‌ಫೂಝಾತ, ಸಂಪುಟ–1, ಪುಟ–86, 1984)

ನಾನು ಪೂರ್ತಿ ಲೋಕಕ್ಕೆ ಅಲ್ಲಾಹನ ಕಡೆಯಿಂದ ಪ್ರವಾದಿಯಾಗಿದ್ದೇನೆ ಎಂದಾಗಿತ್ತು ಅಲ್ಲಾಹನ ಆಜ್ಞೆ ಪ್ರಕಾರ ಹಝ್ರತ್ ಪೈಗಂಬರ್(ಸ)ರ ಘೋಷಣೆ. ಪವಿತ್ರ ಖುರ್‌ಆನ್ ಪೂರ್ತಿ ಲೋಕಕ್ಕೆ ಸನ್ಮಾರ್ಗದ ಮಾರ್ಗವಾಗಿದೆ ಎಂಬುವುದಕ್ಕೂ ಇದು ಪುರಾವೆಯಾಗಿದೆ.

ಪವಿತ್ರ ಖುರ್‌ಆನ್ ಜ್ಞಾನ ಭಂಡಾರವಾಗಿದೆ ಎಂಬುದರ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಪವಿತ್ರ ಖುರ್‌ಆನ್ ಜ್ಞಾನ ಮತ್ತು ಸ್ಥಾಯಿಯಾದ ನಿಯಮಸಂಹಿತೆಯಾಗಿದೆ. ಅದು ಸಕಲ ಬೋಧನೆಗಳ ಭಂಡಾರವಾಗಿದೆ. ಈ ರೀತಿಯಾಗಿ ಪವಿತ್ರ ಖುರ್‌ಆನಿನ ಮೊದಲ ಶ್ರೇಷ್ಠತೆಯು ಅದರ ಉನ್ನತ ಮಟ್ಟದ ಅಧ್ಯಾಪನೆಯಾಗಿದೆ. ಅದರ ಎರಡನೇ ಶ್ರೇಷ್ಠತೆ ಅದರ ಮಹತ್ತಾದ ಭವಿಷ್ಯವಾಣಿಯಾಗಿವೆ. ಹಝ್ರತ್ ಪೈಗಂಬರ್(ಸ)ರ ಪೂರ್ತಿ ಮಕ್ಕಾ ಜೀವನ ಭವಿಷ್ಯವಾಣಿಗಳಿಂದ ತುಂಬಿವೆ. ಒಬ್ಬ ಬುದ್ಧಿವಂತನು ದೇವರ ಭಯದಿಂದ ಅದನ್ನು ಧ್ಯಾನಿಸಿದರೆ, ಹಝ್ರತ್ ಪೈಗಂಬರ್(ಸಲ್ಲಲ್ಲಾಹು ಅಲೈಹಿವಸಲ್ಲಮ್) ಅವರ ಅದೃಶ್ಯ ಸುದ್ದಿಯನ್ನು ಎಷ್ಟು ಸ್ವೀಕರಿಸಿದ್ದಾರೆಂದು ಅವನಿಗೆ ತಿಳಿಯುತ್ತದೆ. ಆ ಸಮಯದಲ್ಲಿ, ಇಡೀ ಸಮೂದಾಯವು ಅವರ(ಸ) ವಿರುದ್ಧವಾಗಿ ಮತ್ತು ಸಹಾನುಭೂತಿ ಅಥವಾ ಸ್ನೇಹಿತ ಯಾರೂ ಇಲ್ಲದಿದ್ದಾಗ, ಅವರು **ಸಯುಹ್‌ಝುಮುಲ್ಜಮ್‌ಉ ವಯುವಲ್ಲೂನದ್ದುಬುರ** (ಅಲ್‌ಖಮರ್:46) ಅಂದರೆ: ಆದರೆ, ಆ ಪಂಗಡದವರು ಶೀಘ್ರದಲ್ಲೇ ಪರಾಜಯಗೊಳ್ಳುವರು; ಅವರು ಬೆನ್ನುಹಾಕಿ ಓಡುವರು ಎಂದು ಹೇಳಲು ಸಾಧ್ಯವೇ. ಬೇರೆ ಅರ್ಥದಲ್ಲಿ ಹೇಳುವುದಾದರೆ ಅವರ ಜಮಾಅತ್ ಅನ್ನು ಸೋಲಿಸಲಾಗುವುದು ಹೀಗೆ ಅವರು ಬೆನ್ನುಹಾಕಿ ಓಡಿಹೋಗುವರು. ಅವರು ಹೇಳುತ್ತಾರೆ ಇದು ಸಣ್ಣ ವಿಷಯವಲ್ಲ. "ಕಾರಣಾಂತರಗಳಿಂದ ಅವರು ಮುಕ್ತಾಯ ಹೊಂದುವುದು ಖಚಿತ ಎಂದು ಫತ್ವವನ್ನು ನೀಡಲಾಗುತ್ತಿತ್ತು." ಆದರೆ ಹಝ್ರತ್ ಪೈಗಂಬರ್(ಸ) ರವರು ಇಂತಹ ಪರಿಸ್ಥಿತಿಯಲ್ಲಿ ತಮ್ಮ ವಿಜಯದ ಬಗ್ಗೆ ಹಾಗೂ ವೈರಿಗಳ ಅವಮಾನ ಮತ್ತು ದುರ್ಬಲತೆಯ ಮುನ್ಸೂಚನೆಗಳನ್ನು ನೀಡುತ್ತಿದ್ದಾರೆ ಮತ್ತು ಅಂತಿಮವಾಗಿ ಅದು ಹಾಗೆಯೇ ಸಂಭವಿಸುತ್ತದೆ."

ಪವಿತ್ರ ಖುರ್‌ಆನ್‌ನಲ್ಲಿ ಉಲ್ಲೇಖಿಸಲಾದ ಈ ಭವಿಷ್ಯವಾಣಿಯನ್ನು ಮಕ್ಕಾದಲ್ಲಿ ಸರ್ವಶಕ್ತನಾದ ಅಲ್ಲಾಹನು ರಸೂಲುಲ್ಲಾಹ್(ಸ) ಅವರಿಗೆ ನೀಡಿದ್ದಾನೆ ಮತ್ತು ಅವರು ಮಕ್ಕಾದಲ್ಲಿ ತೀವ್ರ ದೌರ್ಬಲ್ಯದಲ್ಲಿದ್ದಾಗ ಆರಂಭಿಕ ಪರಿಸ್ಥಿತಿಗಳಲ್ಲಿ ಮತ್ತು ನಂತರ ಭವಿಷ್ಯವಾಣಿಯು ಹೇಗೆ ನೆರವೇರಿತು. ಇಹ್‌ಝಾಬ್ ಯುದ್ಧದಲ್ಲಿ, ನಾವು ಸಾಮಾನ್ಯವಾಗಿ ಅದನ್ನು ಅಲ್ಲಿ ಅನ್ವಯಿಸುವುದನ್ನು ನೋಡುತ್ತೇವೆ ಮತ್ತು ನಾಸ್ತಿಕರ ಭಾರೀ ಸೈನ್ಯವು ಮುಸ್ಲಿಮರಿಗೆ ಬೆನ್ನು ತಿರುಗಿಸಿ ಓಡಿಹೋದ ಸ್ಥಳಗಳೂ ಇವೆ. ಮತ್ತೆ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ, ಸಾವಿರದ ಮುನ್ನೂರು ವರ್ಷಗಳ ನಂತರ ಸ್ಥಾಪಿತವಾಗಲಿದ್ದ ಜಮಾಅತಿನ ಮತ್ತು ಆ ಸಮಯದ ಲಕ್ಷಣಗಳು ಹಾಗೂ ಗುರುತುಗಳ ಕುರಿತು ಇರುವ ಭವಿಷ್ಯವಾಣಿಗಳು ಎಷ್ಟು ಮಹತ್ತರ ಮತ್ತು ಅತುಲ್ಯವಾಗಿವೆ. ಎಂದರೆ ಮಸೀಹ್ ಮೌಊದ್‌ರ ಕಾಲದಲ್ಲಿ ಈಡೇರಬೇಕಾಗಿದ್ದ ಭವಿಷ್ಯವಾಣಿಗಳು ಈಗಲೂ ವೈಭವಶಾಲಿಯಾಗಿ ಈಡೇರುತ್ತಿವೆ. ಲೋಕದ ಯಾವುದೇ ಗ್ರಂಥ ಆ ಭವಿಷ್ಯವಾಣಿಗಳಿಗೆ ಸರಿಸಾಟಿಯಾಗಿ ನಿಲ್ಲಲು ಸಾಧ್ಯವಲ್ಲ. (ಮಲ್‌ಫೂಝಾತ್, ಸಂಪುಟ–3, ಪುಟ–43–44, 1984)

ನಂತರ, ಪವಿತ್ರ ಖುರ್‌ಆನ್‌ನ ಸದ್ಗುಣಗಳನ್ನು ವಿವರಿಸುತ್ತಾ ಪವಿತ್ರ ಖುರ್‌ಆನ್‌ನ ಪ್ರತಿಯೊಂದು ಆಜ್ಞೆಯು ಒಂದು ಉದ್ದೇಶದಿಂದ ಪ್ರೇರೇಪಿಸಲ್ಪಟ್ಟಿದೆ ಎಂದು ಹೇಳುತ್ತಾ, ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಬುದ್ಧಿ, ವಿವೇಕ, ಆಲೋಚನೆ ಮತ್ತು ಸತ್ಯವಿಶ್ವಾಸವನ್ನು ಕೈಗೊಳ್ಳಬೇಕೆಂದು ಪವಿತ್ರ ಖುರ್‌ಆನ್ ಹಲವೆಡೆ ತಾಕೀತು ಮಾಡುತ್ತದೆ. ಪವಿತ್ರ ಖುರ್‌ಆನ್ ಮತ್ತು ಇತರ ಗ್ರಂಥಗಳಲ್ಲಿ ಇರುವ ವ್ಯತ್ಯಾಸ ಇದೇ ಆಗಿದೆ. ಯಾವುದೇ ಗ್ರಂಥ ತನ್ನ ಅಧ್ಯಾಪನೆಯನ್ನು ಬುದ್ಧಿ, ಆಲೋಚನೆ, ಸ್ವತಂತ್ರ ವಿಮರ್ಶೆಯ ಮುಂದೆ ಹಾಕಲು ಧೈರ್ಯಪಟ್ಟಿಲ್ಲ.

ಹಝ್ರತ್ ಮಸೀಹ್ ಮೌಊದ್(ಅ) ರವರು ಇಂಜೀಲ್‌ನ ಉದಾಹರಣೆಯನ್ನು ನೀಡುತ್ತಾ ಹೇಳಿದರು: "ಮೌನ ಇಂಜೀಲ್‌ನ ಕುತಂತ್ರ ಮತ್ತು ಉತ್ಕಟ ಬೆಂಬಲಿಗರು, ತರ್ಕಬದ್ಧ ಬಲದ ಮುಂದೆ ಇಂಜೀಳ್‌ನ ಬೋಧನೆಯು ನಿರ್ಜೀವವಾಗಿದೆ ಎಂದು ಭಾವಿಸಿ, ತಮ್ಮ ನಂಬಿಕೆಗಳಲ್ಲಿ ತ್ರೈಯೆಕತ್ವ ಮತ್ತು ಪಾಪನಿವೃತ್ತಿಯು (ಕಫ್ಫಾರಃ) ಎಂತಹ ರಹಸ್ಯವಾಗಿದೆ ಎಂದರೆ ಮಾನವನ ಬುದ್ಧಿಶಕ್ತಿಯು ಅದನ್ನು ತಲುಪಲು ಸಾಧ್ಯವಿಲ್ಲ." ಬಹಳ ಗಂಭೀರವಾದ ಜ್ಞಾನವಾಗಿದೆ ಅದನ್ನು ತಲುಪಲು ನಿಮ್ಮಿಂದ ಸಾಧ್ಯವಿಲ್ಲ. ಆದ್ದರಿಂದ ಅದನ್ನು ಹೇಳಿದಂತೆ ಸ್ವೀಕರಿಸಿ, ಆದರೆ "ಇದಕ್ಕೆ ವಿರುದ್ಧವಾದ ಫುರ್ಖಾನ್ ಹಮೀದ್‌ನ (ಪವಿತ್ರ ಖುರ್‌ಆನ್‌ನ) ಬೋಧನೆಯು **ಇನ್ನಾ ಫೀ ಖಲ್‌ಖಿಸ್ಸಮಾವಾತಿ ವಲ್ ಅರ್ಝಿ ವಖ್ತಿಲಾಫಿಲ್ಲೈಲಿ ವನ್ನಾಹಿ ಲಆಯಾತಿಲ್ಲಿ ಊಲಿಲ್ ಅಲ್‌ಬಾಬ್– ಅಲ್ಲಝೀನ ಯಝ್‌ಕುರೂನಲ್ಲಾಹ–** (ಆಲಿ ಇಮ್ರಾನ್: 191–192) ಅಂದರೆ, ಆಕಾಶಗಳ ಮತ್ತು ಭೂಮಿಯ ಸೃಷ್ಟಿಯಲ್ಲೂ ರಾತ್ರಿ ಹಗಲು ರೂಪಾಂತರದಲ್ಲೂ ದಿಟವಾಗಿಯೂ ಬುದ್ಧಿಶಾಲಿಗಳಿಗೆ (ಹಲವು) ದೃಷ್ಟಾಂತಗಳಿವೆ. ನಿಂತುಕೊಂಡು, ಕುಳಿತುಕೊಂಡು ಹಾಗೂ ತಮ್ಮ ಪಾರ್ಶ್ವಗಳಲ್ಲಿ ಮಲಗಿಕೊಂಡು ಅಲ್ಲಾಹನನ್ನು ಸ್ಮರಿಸುತ್ತಲೂ ಆಕಾಶಗಳ ಮತ್ತು ಭೂಮಿಯ ಸೃಷ್ಟಿಯ ಕುರಿತು ಚಿಂತನೆ ಮಾಡುತ್ತಲೂ ಅವರು (ಆ ಬುದ್ಧಿಶಾಲಿಗಳು)– "ನಮ್ಮ ಪ್ರಭೂ, ನೀನು ಇವನ್ನೆಲ್ಲ ವ್ಯರ್ಥವಾಗಿ ಸೃಷ್ಟಿಸಲಿಲ್ಲ. (ಅಂತಹ ನಿಷ್ಪ್ರಯೋಜಕ ಕೃತ್ಯಗಳಿಂದ) ನೀನು ಪರಿಶುದ್ಧನಾಗಿರುವೆ. ನೀನು ನಮ್ಮನ್ನು ನರಕಾಗ್ನಿಯಿಂದ ರಕ್ಷಿಸು." ಅದರ ಕಡೆ ಇಸ್ಲಾಂ ಧರ್ಮವು ಆಹ್ವಾನಿಸುತ್ತದೆ. ಬುದ್ಧಿವಂತರು ತಮ್ಮ ಬುದ್ಧಿವಂತಿಕೆ ಮತ್ತು ಮೆದುಳನ್ನು ಸಹ ಬಳಸಬೇಕೆಂಬ ಈ ಆಯತ್‌ನಲ್ಲಿನ ಆದೇಶವು ಎಷ್ಟು ಸ್ಪಷ್ಟವಾಗಿದೆ.
(ಮಲ್‌ಫೂಝಾತ್, ಸಂಪುಟ–1, ಪುಟ–62–63, 1984) ಯೋಚಿಸಿರಿ.

ಪವಿತ್ರ ಖುರ್‌ಆನ್ ಒಂದು ಸುರಕ್ಷಿತ ಗ್ರಂಥವಾಗಿದೆ. ಅಲ್ಲಾಹನು ಹೇಳುತ್ತಾನೆ: **ಇನ್ನಹೂ ಲಖುರ್‌ಆನುನ್ ಕರೀಮುನ್ ಫೀ ಕಿತಾಬಿಮ್ಮ ಕ್‌ನೂನಿಲ್ಲಾ ಯಮುಸ್ಸುಹೂ ಇಲ್ಲಲ್ ಮುತಹ್ಹರೂನ** (ಅಲ್‌ವಾಖಿಯ: 78–80) ಖಂಡಿತವಾಗಿಯೂ ಇದೊಂದು ಆದರಣೀಯ ಖುರ್‌ಆನ್ ಆಗಿದೆ. ಅದರ ಅಸ್ತಿತ್ವ ಕಾಗದಗಳಿಗೆ ಪರಿಮಿತವಲ್ಲ. ಬದಲಾಗಿ ಅದೊಂದು ಸುರಕ್ಷಿತವಾದ ಗ್ರಂಥವಾಗಿದೆ. ಅದನ್ನು ಸಹಜ ಪ್ರಕೃತಕ್ಕೆ ಅನುಸಾರವಾಗಿ ಇರುವ ಗ್ರಂಥವೆಂದು ಹೇಳಲಾಗುತ್ತದೆ. ಅದರ ಬೋಧನೆಗಳು ಅಳಿದು ಹೋಗುವ ಕಥೆಗಳಲ್ಲ. (ಮಲ್‌ಫೂಝಾತ್, ಸಂಪುಟ–1, ಪುಟ–64–65, 1984)

ಬದಲಾಗಿ ಅದನ್ನು ಮನವರಿಕೆ ಮಾಡುವವನು ಮತ್ತು ಅದರ ಪ್ರಕಾರ ನಡೆಯುವವನು ಅಲ್ಲಾಹನ ಅನುಗ್ರಹಗಳನ್ನು ಗಳಿಸುವನು. ಅದರ ಪ್ರಭಾವಗಳು ಮತ್ತು ಆಳವಾದ ರಹಸ್ಯಗಳು ಪರಿಶುದ್ಧ ಜನರ ಮುಂದೆ ತೆರೆಯುತ್ತದೆ. ಅದಕ್ಕಾಗಿ ಪರಿಶುದ್ಧ ಜನರ ಸಹವಾಸದಿಂದ ಪ್ರಯೋಜನ ಪಡೆಯಬೇಕಾದ ಆವಶ್ಯಕತೆಯಿದೆ. ಈ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಅಲ್ಲಾಹನಿಂದ ಜ್ಞಾನ ಗಳಿಸಿ ಹೇಳಿದ ಸಂಗತಿಗಳನ್ನು ನಾವು ನೋಡಬೇಕು ಮತ್ತು ಯೋಚಿಸಬೇಕು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಈಗ ನೋಡಿ

ಪವಿತ್ರ ಖುರ್‌ಆನಿನ ಹೆಸರು ಝಿಕರ್ ಎಂದು ಕರೆಯಲಾಗಿದೆ. ಇದಕ್ಕೆ ಕಾರಣವೇನೆಂದರೆ ಮನುಷ್ಯನ ಆಂತರಿಕ ಶರಿಯತ್ (ಧರ್ಮನಿಯಮಗಳು) ಸ್ಮರಣೆಗೆ ತರುವುದಾಗಿದೆ. ಖುರ್‌ಆನ್ ಹೊಸದಾದ ಯಾವ ಶಿಕ್ಷಣವನ್ನು ತಂದಿಲ್ಲ ಬದಲಾಗಿ ಮನುಷ್ಯನ ಅಂತರಂಗದಲ್ಲಿರುವ ಸ್ವಾಭಾವಿಕ ಗುಣಗಳ ಶಕ್ತಿಗಳನ್ನು ಒಳಗೊಂಡಿದೆ. ಹೀಗೆ ಪವಿತ್ರ ಖುರ್‌ಆನ್ ಮಾನವನಲ್ಲಿ ಹುದಿಗಿರುವ ಶಕ್ತಿ ಗುಣಗಳನ್ನು ಸ್ಮರಣೆಗೆ ತಂದಿದೆ. ಉದಾಹರಣೆಗೆ: **ಫೀ ಕಿತಾಬಿಮ್ ಮಕ್‌ನೂನ್** (ಅಲ್‌ವಾಖಿಅ:79) ಅಂದರೆ ಇದು ಸುರಕ್ಷಿತವಾದ ಗ್ರಂಥದ ರೂಪದಲ್ಲಿದೆ. ಮಾನವನ ಸಹಜ ಗುಣಗಳ ಶಕ್ತಿಗಳ ಸದುಪಯೋಗಗಳ ರಹಸ್ಯ ಒಳಗೊಂಡಂತ ಗ್ರಂಥವಾಗಿದೆ. ಇದರ ಸಂಪೂರ್ಣ ಅರಿವು ಪಡೆಯಲು ಎಲ್ಲರಿಂದ ಸಾಧ್ಯವಿಲ್ಲ.

ಅದೇ ರೀತಿ ಈ ಗ್ರಂಥದ ಹೆಸರು ಝಿಕರ್ ಎಂದು ಕರೆಯಲಾಗಿದೆ. ಏಕೆಂದರೆ ಇದರ ಅಧ್ಯಯನ ಮಾಡಿ ತಮ್ಮ ಆಂತರಿಕ ಹಾಗೂ ಬಾಹ್ಯ ಆಧ್ಯಾತ್ಮಿಕ ಶಕ್ತಿಗಳ ಮೂಲಕ ಹೃದಯವನ್ನು ಶುದ್ದಗೊಳಿಸಬಹುದು. ಮನುಷ್ಯನಲ್ಲಿ ಅಡಗಿರುವಂತಹ ಈ ದೈವಿಕ ಶಕ್ತಿಗಳ ಅರಿವು ಮುಡಿಸುವುದೇ ಈ ಗ್ರಂಥದ ಉದ್ದೇಶವಾಗಿದೆ. ಒಟ್ಟಿನಲ್ಲಿ ಅಲ್ಲಾಹನು ಖುರ್‌ಆನನ್ನು ಕಳುಹಿಸಿ ಮನುಷ್ಯನಿಗೆ ತನ್ನ ಆಧ್ಯಾತ್ಮಿಕ ಉನ್ನತಿಯನ್ನು ಸಾಧಿಸಲು, ಸಾಕ್ಷ್ಯಗಳನ್ನು ತಿಳಿದುಕೊಳ್ಳಲು ಒಂದು ಅದ್ಭುತವಾದ ಪವಾಡ ಗ್ರಂಥವನ್ನು ನೀಡಿದ್ದಾನೆ. ಈ ಹಿಂದೆ ಮನುಷ್ಯನು ಅರಿತಿರಲಿಲ್ಲ. ಇದಕ್ಕೆ ತುಂಬ ವಿಷಾದವೆನಿಸುತ್ತದೆ. ಖುರ್‌ಆನಿನ ಧ್ಯೇಯವೂ **ಹುದಲ್ಲಿಲ್ ಮುತ್ತಖೀನ್** (ಅಲ್‌ಬಖರ–3) ಭಯ ಭಕ್ತಿಯುಳ್ಳವರಿಗೆ ಇದು ಒಂದು ಮಾರ್ಗದರ್ಶನವಾಗಿದೆ. ಇದನ್ನು ಅರಿಯದೆ ಕೆಲವರು ಕಥೆಗಳ ಸಂಗ್ರಹವೆಂದು ಭಾವಿಸುತ್ತಾರೆ. ಕಾರಣ ಅಲಕ್ಷ ವಹಿಸಿ ಸ್ವಾರ್ಥ ಭಾವನೆಗಳಿಂದ ಕೂಡಿದ ಬಹುದೇವಾರಾಧನೆಗೆ ತುತ್ತಾದ ಅರಬರ ಹಾಗೆ ಇದು ಪುರಾತನ ಕಥೆಗಳು ಎಂದು ಭಾವಿಸಿ ಉಪೇಕ್ಷಿಸುವವರಾಗಿದ್ದಾರೆ. ಆ ಕಾಲವೂ ಹಝ್ರತ್ ರಸುಲುಲ್ಲಾಹ್(ಸ) ರವರ ಆಗಮನದ ಕಾಲವಾಗಿತ್ತು. ಖುರ್‌ಆನ್ ಅವತರಿಸಿದ ಕಾಲವಾಗಿತ್ತು. ಆಗ ಲೋಕದಿಂದ ನಶಿಸಿ ಹೋದ ಆಧ್ಯಾತ್ಮಿಕ ಶಕ್ತಿಗಳನ್ನು ಅವಗಾಹನೆಗೆ ತರುವ ಆಗತ್ಯವಿತ್ತು. ಈಗಿನ ಕಾಲವು ರಸೂಲುಲ್ಲಾಹ್(ಸ) ರವರ ಭವಿಷ್ಯವಾಣಿಗಳ ಪ್ರಕಾರ ಜನರು ಖುರ್‌ಆನ್ ಓದುವವರಾದರು ಅದರ ಸಾರ ಅವರ ಗಂಟಲಿನಿಂದ ಕೆಳಗೆ ಇಳಿಯುವುದು (ಅಂದರೆ ಅದರ ಅರ್ಥ ತಿಳಿಯದವರಾಗುವರು ಎಂದು) ಈಗ ನೀವು ಕಣ್ಣಾರೆ ನೊಡುತ್ತಿರುವಿರಿ. ಜನರು ಎಷ್ಟು ಮಧುರ ಕಂಠದಿಂದ ಮತ್ತು ಉತ್ತಮ ರೀತಿಯಲ್ಲಿ ಖುರ್‌ಆನ್ ಪಠಿಸುತ್ತಾರೆ ಆದರೆ ಅದು ಅವರ ಗಂಟಲಿನಿಂದ ಕೆಳಗೆ ಇಳಿಯುವುದಿಲ್ಲ. ಆದ್ದರಿಂದ ಪವಿತ್ರ ಖುರ್‌ಆನಿನ ಇನ್ನೊಂದು ಹೆಸರು ಝಿಕರ್ ಎಂದು ಹೇಳಲಾಗಿದೆ. ಆಗ ಪ್ರಾರಂಭದ ಕಾಲದಲ್ಲಿ ಮನುಷ್ಯನಲ್ಲಿ ಹುದುಗಿರುವ ಮತ್ತು ಮರೆತಿರುವ ಸುಪ್ತ ಗುಣಗಳನ್ನು ಮತ್ತು ಸಾಕ್ಷಗಳನ್ನು ನೆನಪಿಗೆ ತರುವುದಾಗಿತ್ತು.

ಅಲ್ಲಾಹನ ಕರಾರುವತ್ತಾದ ವಾಗ್ದಾನ ಪ್ರಕಾರ **ಇನ್ನಾಲಹು ಲಹಾಫಿಝೂನ್** (ಅಲ್‌ಹಿಜರ್–10) ವಚನದ ಸಾಕ್ಷ್ಯ ಹಾಗೂ ವಾಗ್ದತ ಗುರು ನಾನಾಗಿದ್ದೇನೆ. (ಮಲ್‌ಫೂಝಾತ್, ಸಂಪುಟ–1, ಪುಟ–60, 1988) ನಾವು ನಮ್ಮೊಳಗೆ ನೋಡಿ. ಕಾಲದ ಅಗತ್ಯ ನೋಡಿ. ಮುಸ್ಲಿಮರ ಸಾಮಾನ್ಯ ಪರಿಸ್ಥಿತಿಗಳನ್ನು ನೋಡಿ. ಕೇವಲ ಸ್ಪಷ್ಟವಾದ ಫತ್ವಾಗಳಿಗೆ ಒತ್ತು ನೀಡುವ ಮೂಲಕ ಇಸ್ಲಾಂ ಧರ್ಮವನ್ನು ಅಪಖ್ಯಾತಿ ಮಾಡಲು ಪ್ರಯತ್ನಿಸಬೇಡಿ. ಪವಿತ್ರ ಖುರ್‌ಆನ್‌ನ ಸತ್ಯವನ್ನು ಅರ್ಥಮಾಡಿಕೊಳ್ಳಿ. ಆದಾಗ್ಯೂ, ನಾವು ಅಹ್ಮದೀಯರು ಪವಿತ್ರ ಖುರ್‌ಆನ್‌ನ ಬೋಧನೆಗಳ ಸತ್ಯವನ್ನು ನಾವು ಎಷ್ಟರ ಮಟ್ಟಿಗೆ ಅರ್ಥಮಾಡಿಕೊಳ್ಳುತ್ತೇವೆ ಮತ್ತು ಅದನ್ನು ಅನುಸರಿಸಲು ಪ್ರಯತ್ನಿಸುತ್ತೇವೆ ಅಥವಾ ಅದನ್ನು ಮಾಡುತ್ತಿದ್ದೇವೆ ಎಂಬುದನ್ನು ನಿರಂತರವಾಗಿ ಮೌಲ್ಯಮಾಪನ ಮಾಡಬೇಕು.

ಮತ್ತೆ ಪವಿತ್ರ ಖುರ್‌ಆನ್ ಜನರಿಗೆ ಸತ್ಯದ ವಿಜ್ಞಾನಗಳೊಂದಿಗೆ ಪರಿಚಿತರಾಗಲು ಬಯಸುತ್ತದೆ ಎಂದು ಹೇಳುತ್ತಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: "ಜನರು ತನಗೆ ಭಯಪಡಬೇಕೆಂದು ಸರ್ವಶಕ್ತನಾದ ಅಲ್ಲಾಹನು ಬಯಸುತ್ತಿರುವಂತೆಯೇ, ಜನರು ನಿಜವಾದ ಜ್ಞಾನದ ಪ್ರಕಾಶವನ್ನು ಹೊಂದಬೇಕೆಂದು ಬಯಸುತ್ತಾನೆ." ಕೇವಲ ಭಯವಲ್ಲ ಬದಲಿಗೆ ಜ್ಞಾನದ ಪ್ರಕಾಶವನ್ನು ಸೃಷ್ಟಿಸಬೇಕು ಎಂದು ಬಯಸುತ್ತಾನೆ ಹೀಗೆ ಇದರ ಮೂಲಕ ಅವರು ಜ್ಞಾನದ ಗುರಿಗಳನ್ನು ತಲುಪಬೇಕು. ನಿಮ್ಮ ಆಲೋಚನೆಗಳು ವಿಶಾಲವಾಗಿರಬೇಕು "ಏಕೆಂದರೆ ಸತ್ಯದ ವಿಜ್ಞಾನಗಳ ಪರಿಚಯವು ಒಂದೆಡೆ ನಿಜವಾದ ಭಯವನ್ನು ಉಂಟುಮಾಡುತ್ತದೆ, ಮತ್ತೊಂದೆಡೆ ಈ ವಿಜ್ಞಾನಗಳು ದೈವಿಕತೆಯನ್ನು ಉಂಟುಮಾಡುತ್ತದೆ. ಹೀಗೆ ಓರ್ವ ಮುಮಿನ್ ಯೋಚಿಸಿದಾಗ, ಪವಿತ್ರ ಖುರ್‌ಆನ್ ಅನ್ನು ಅರ್ಥಮಾಡಿಕೊಂಡಾಗ ಮತ್ತು ಲೌಕಿಕ ವಿಜ್ಞಾನಗಳನ್ನು ಪಡೆದುಕೊಂಡು ಅವುಗಳನ್ನು ಪವಿತ್ರ ಖುರ್‌ಆನ್‌ನಲ್ಲಿ ಪರೀಕ್ಷಿಸಿದರೆ ನಂತರ ದೈವಜ್ಞಾನವನ್ನು ಸಹ ರಚಿಸಲಾಗುವುದು, ಸರ್ವಶಕ್ತನಾದ ಅಲ್ಲಾಹನ ಭಯವನ್ನು ಸಹ ರಚಿಸಲಾಗುವುದು. ಹೀಗೆ ಭಯವು ಸಹ ಹುಟ್ಟುತ್ತದೆ. ಅವರು ಹೇಳಿದರು, "ಆದರೆ ಕೆಲವು ದುರದೃಷ್ಟಕರ ಜನರು ವಿಜ್ಞಾನದಲ್ಲಿ ಕಳೆದುಹೋಗಿದ್ದಾರೆ ಮತ್ತು ಅದೃಷ್ಟದಿಂದ ದೂರ ಸರಿಯುತ್ತಾರೆ ಮತ್ತು ಸರ್ವಶಕ್ತನಾದ ಅಲ್ಲಾಹನ ಅಸ್ತಿತ್ವವನ್ನು ಅನುಮಾನಿಸುತ್ತಾರೆ ಮತ್ತು ಕೆಲವರು ವಿಜ್ಞಾನದಿಂದಲೇ ವಿಧಿಯ ಬಗ್ಗೆ ಮನವರಿಕೆ ಮಾಡಿಕೊಂಡು ಜ್ಞಾನದಿಂದಲೇ ದೂರಸರಿದಿದ್ದಾರೆ." ಅವರು ಲೌಕಿಕ ಜ್ಞಾನದ ಹೆಸರಿನಲ್ಲಿ, ಹೊಸ ಜ್ಞಾನದ ಹೆಸರಿನಲ್ಲಿ ಸರ್ವಶಕ್ತ ದೇವರನ್ನು ಮರೆತುಬಿಟ್ಟರು ಅಥವಾ ಇನ್ನೊಂದು ಕಡೆ ಅವರು ಸರ್ವಶಕ್ತನಾದ ಅಲ್ಲಾಹನ ಬಳಿಗೆ ಬರುವ ಹೆಸರಿನಲ್ಲಿ ಜ್ಞಾನಕ್ಕೆ ಹೆದರುತ್ತಿದ್ದರು ಮತ್ತು ಅದನ್ನು ಬಿಟ್ಟು, ಇದು ತಪ್ಪು ಎಂದು ಹೇಳಿದರು. ಅವರು ಮುಂದೆ ಹೇಳುತ್ತಾರೆ: "ಆದರೆ ಪವಿತ್ರ ಖುರ್‌ಆನ್ ಎರಡೂ ಬೋಧನೆಗಳನ್ನು ನೀಡಿದೆ ಮತ್ತು ಅವುಗಳನ್ನು ಪರಿಪೂರ್ಣವಾಗಿ ನೀಡಿದೆ." ಪವಿತ್ರ ಖುರ್‌ಆನ್ ಜನರಿಗೆ ಸತ್ಯದ ವಿಜ್ಞಾನಗಳೊಂದಿಗೆ ಪರಿಚಿತರಾಗಲು ಬಯಸುತ್ತದೆ ಮತ್ತು ಅದಕ್ಕಾಗಿಯೇ ಅದು ಮಾನವನನ್ನು ಆಕರ್ಷಿಸುತ್ತದೆ ಏಕೆಂದರೆ ಅದು ಅಲ್ಲಾಹನ ಭಯವನ್ನು ಉಂಟುಮಾಡುತ್ತದೆ ಮತ್ತು ಹೀಗೆ ದೈವಜ್ಞಾನದಲ್ಲಿ ಪ್ರಗತಿ ಹೊಂದುತ್ತಿದ್ದಂತೆ, ಅಲ್ಲಾಹನ ಹಿರಿಮೆ ಮತ್ತು ಆತನ ಮೇಲಿನ ಪ್ರೀತಿಯು ಹೆಚ್ಚಾಗುತ್ತದೆ. ಮತ್ತು ಇದು ಅಲ್ಲಾಹನ ಚಿತ್ತದ ಅಡಿಯಲ್ಲಿ ಬದುಕಲು ಮನುಷ್ಯನಿಗೆ ಕಲಿಸುತ್ತದೆ, ಇದರಿಂದ ಅವನು ಸರ್ವಶಕ್ತನಾದ ಅಲ್ಲಾಹನಲ್ಲಿ ನಂಬಿಕೆ ಮತ್ತು ವಿಶ್ವಾಸದ ಗುಣಮಟ್ಟವನ್ನು ಬೆಳೆಸಿಕೊಳ್ಳುತ್ತಾನೆ ಮತ್ತು ಅವನು ತೃಪ್ತಿಯಿಂದ ಬದುಕುವ ವಾಸ್ತವತೆಯು ಬಗ್ಗೆ ಪರಿಚಿತನಾಗುತ್ತಾನೆ ಮತ್ತು ನಿಜವಾದ ಶಾಂತಿ ಮತ್ತು ತೃಪ್ತಿಯನ್ನು ಪಡೆಯುತ್ತಾನೆ. ಮೋಕ್ಷದ ನಿಜವಾದ ಗುರಿ ಮತ್ತು ಉದ್ದೇಶವು ಅದನ್ನು ಪಡೆಯುವುದಾಗಿದೆ." (ಮಲ್‌ಫೂಝಾತ್, ಸಂಪುಟ–1, ಪುಟ–223–224, 1984)

ನಂತರ ಹಝ್ರತ್ ಮಸೀಹ್ ಮೌಊದ್(ಅ) ಅವರು ಹೇಳಿದರು, "ಸರ್ವಶಕ್ತನಾದ ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಈ ಉಮ್ಮತ್ತಿಗೆ ನಿಜವಾದ ಜ್ಞಾನದ ಮೂಲವನ್ನು ನೀಡಿದ್ದಾನೆ. ಪವಿತ್ರ ಖುರ್‌ಆನ್‌ನಲ್ಲಿ ವಿವರಿಸಲಾದ ಮತ್ತು ನಿಜವಾದ ಧರ್ಮನಿಷ್ಠೆ ಮತ್ತು ದೈವಭಯದಿಂದ ಮಾತ್ರ ಪಡೆದ ಸತ್ಯಗಳು ಮತ್ತು ಜ್ಞಾನವನ್ನು ಪಡೆಯುವ ವ್ಯಕ್ತಿಯನ್ನು ಬನೀ ಇಸ್ರಾಈಲ್‌ನ ಪ್ರವಾದಿಗಳ ಹಾಗೆ ಮಾಡುತ್ತಾನೆ. ಹೌದು, ಒಬ್ಬ ವ್ಯಕ್ತಿಗೆ ಆಯುಧವನ್ನು ನೀಡಿದರೆ, ಅವನು ಅದನ್ನು ಬಳಸದಿದ್ದರೆ, ಅದು ಅವನ ಸ್ವಂತ ತಪ್ಪೇ ಹೊರತು ಆಯುಧದ ತಪ್ಪಲ್ಲ ಎಂಬುದು ಸಂಪೂರ್ಣವಾಗಿ ನಿಜ ಸಂಗತಿಯಾಗಿದೆ. ಇದು ಜಗತ್ತಿನ ಪ್ರಸ್ತುತ ಸ್ಥಿತಿಯಾಗಿದೆ. ಮುಸ್ಲಿಮರು, ಪವಿತ್ರ ಖುರ್‌ಆನ್‌ನಂತಹ ಅನುಪಮವಾದ ಅನುಗ್ರಹವನ್ನು ಹೊಂದಿದ್ದರೂ, ಅದು ಅವರನ್ನು ಪ್ರತಿ ದೋಷದಿಂದ ರಕ್ಷಿಸಿತು ಮತ್ತು ಪ್ರತಿ ಕತ್ತಲೆಯಿಂದ ಅವರನ್ನು ಹೊರತಂದಿತು, ಆದರೆ ಅವರು ಅದನ್ನು ತ್ಯಜಿಸಿದರು ಮತ್ತು ಅದರ ಶುದ್ಧ ಬೋಧನೆಗಳ ಬಗ್ಗೆ ಕಾಳಜಿ ವಹಿಸಲಿಲ್ಲ. ಪರಿಣಾಮವಾಗಿ ಅವರು ಇಸ್ಲಾಂನಿಂದ ಸಂಪೂರ್ಣವಾಗಿ ದೂರ ಹೋಗಿದ್ದಾರೆ." (ಮಲ್‌ಫೂಝಾತ್, ಸಂಪುಟ–1, ಪುಟ–349, 1984)

ಆದ್ದರಿಂದ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು ಮುಸ್ಲಿಮರು ಪವಿತ್ರ ಖುರ್‌ಆನ್‌ನ ಮಹತ್ತರವಾದ ಬೋಧನೆಗಳಿಂದ ದೂರ ಸರಿದು ಕೇವಲ ಹೆಸರಿಗೆ ಮಾತ್ರ ಮುಸ್ಲಿಮರಾಗಿದ್ದಾರೆ. ಇಸ್ಲಾಮಿನ ಪ್ರಾಥಮಿಕ ಮತ್ತು ಮೂಲಭೂತ ಪಾಠಗಳು ಮತ್ತು ಚರಿತ್ರೆಯ ಅರಿವು ಕೂಡ ಜನರಿಗೆ ಇಲ್ಲವೆಂದು ಇಂದಿನ ಸೋಶಿಯಲ್ ಮೀಡಿಯದ ಕೆಲವು ಚಿಕ್ಕ ಚಿಕ್ಕ ಕಾರ್ಯಕ್ರಮಗಳಿಂದ ಮತ್ತು ಕ್ಲಿಪ್‌ಗಳಿಂದ ತಿಳಿದು ಬರುತ್ತದೆ. ಕೇವಲ ಮೌಲವಿಗಳು ಹೇಳುವ ಕಾರಣದಿಂದ ಪ್ರವಾದಿತ್ವದ ಗೌರವ ಅಥವಾ ಪವಿತ್ರ ಖುರ್‌ಆನ್ ಅಥವಾ ಸಹಾಬಿಯರ ಹೆಸರಲ್ಲಿ ಅಹ್ಮದಿಯಾ ಜಮಾಅತಿನ ವಿರುದ್ಧ ಘೋಷಣೆ ಕೂಗಲು ಮತ್ತು ನಷ್ಟ ಉಂಟುಮಾಡಲು ಪ್ರಯತ್ನಿಸುತ್ತಾರೆ. ಬಾಂಗ್ಲಾದೇಶದಿಂದ ಒಬ್ಬರು ನನಗೆ ಹೀಗೆ ಪತ್ರ ಬರೆದರು: ಮೆರವಣಿಗೆ ಬಂದು ದಾಳಿ ನಡೆಸುವ ವೇಳೆ ಒಬ್ಬ ಹುಡುಗ ಕಲ್ಲು ಎಸೆಯುತ್ತಿದ್ದನು. ಹೀಗೆ ಮಾಡಬೇಕೆಂದು ಪವಿತ್ರ ಖುರ್‌ಆನಿನಲ್ಲಿ ಬರೆಯಲಾಗಿದೆಯೇ?, ಇದು ಇಸ್ಲಾಮಿನ ಪಾಠವೇ? ನಾವಂತು ಕಲಿಮ ಹೇಳುವವರಾಗಿದ್ದೇವೆ ಎಂದು ನಮ್ಮ ಒಬ್ಬ ಅಹ್ಮದಿ ಅವನೊಡನೆ ಹೇಳಿದರು. ಆಗ ಅವನು ತಕ್ಷಣವೇ ಕಲ್ಲನ್ನು ನೆಲಕ್ಕೆ ಹಾಕಿದನು. ಒಟ್ಟಿನಲ್ಲಿ ಅಂತಹ ಜನರು ಮೌಲವಿಗಳು ಆವೇಶ ನೀಡಿದ ಕಾರಣದಿಂದ ಇಂತಹ ಕೃತ್ಯಗಳನ್ನು ಮಾಡುತ್ತಾರೆ. ಅಲ್ಲಾಹನು ಅಂತಹ ದುಷ್ಟರ ಉಪದ್ರಗಳಿಂದ ನಮ್ಮನ್ನು ಸುರಕ್ಷಿತಗೊಳಿಸಲಿ. ನಾವು ರಮಝಾನಿನಲ್ಲೂ ನಂತರವೂ ಪವಿತ್ರ ಖುರ್‌ಆನನ್ನು ಮನವರಿಕೆ ಮಾಡುವಂತಾಗಲು,

ಕಲಿಯುವಂತಾಗಲು ಮತ್ತು ಅದರ ಪ್ರಕಾರ ನಡೆಯುವಂತಾಗಲು ನಮಗೆ ಸೌಭಾಗ್ಯ ನೀಡಲಿ.

ಈ ದುಷ್ಟರ ದುಷ್ಟರಿಂದ ಅಲ್ಲಾಹನು ನಮ್ಮನ್ನು ರಕ್ಷಿಸಲಿ ಮತ್ತು ಈ ರಮಝಾನ್‌ನಲ್ಲಿ ಪವಿತ್ರ ಖುರ್‌ಆನ್ ಅನ್ನು ಅರ್ಥಮಾಡಿಕೊಳ್ಳುವ, ಕಲಿಯುವ ಮತ್ತು ಅಭ್ಯಾಸ ಮಾಡುವ ಸಾಮರ್ಥ್ಯವನ್ನು ನಮಗೆ ನೀಡಲಿ. ಅಲ್ಲಾಹನು ನಮ್ಮನ್ನು ಪ್ರಪಂಚದ ಕೊಳಕುಗಳಿಂದ ರಕ್ಷಿಸಲಿ.

ರಮಝಾನಿನಲ್ಲಿ ದುಆಗಳ ಕಡೆಗೂ ವಿಶೇಷವಾದ ಗಮನವನ್ನು ನೀಡಿರಿ. ಅಲ್ಲಾಹನು ಎಲ್ಲೆಡೆ ಪ್ರತಿಯೊಬ್ಬ ಅಹ್ಮದಿಯನ್ನು ಪ್ರತಿಯೊಂದು ಕೆಡುಕುಗಳಿಂದ ರಕ್ಷಣೆ ನೀಡಲಿ. ಅಲ್ಲಾಹನ ದೃಷ್ಟಿಯಲ್ಲಿ ಸುಧಾರಣೆಗೆ ಯೋಗ್ಯವಲ್ಲದ ಜನರು ಶಿಕ್ಷಿಸಪಡಲಿ. ಇದರಿಂದ ಇತರ ಜನರು ಅಲ್ಲಾಹನ ಆದೇಶಗಳನ್ನು ಪಾಲಿಸುವಂತಾಗುವರು. ಲೋಕಕ್ಕಾಗಿಯೂ ದುಆ ಮಾಡಿರಿ, ಅಲ್ಲಾಹನು ಯುದ್ಧದ ಆಪತ್ತಿನಿಂದ ಲೋಕವನ್ನು ರಕ್ಷಿಸಲಿ. ಆಮೀನ್.

ಈಗ, ನಾನು ಕೆಲವು ಮೃತರ ಬಗ್ಗೆ ಉಲ್ಲೇಖಿಸಲು ಬಯಸುತ್ತೇನೆ ಮೊದಲನೆಯದಾಗಿ, ನಮ್ಮ ಓರ್ವ ಮುರಬ್ಬಿಯಾಗಿದ್ದಾರೆ, ಮುಬಲ್ಲಿಗ್ ಆಗಿದ್ದಾರೆ ಅವರು ತಮ್ಮ ವಕ್ಫ್ ಅನ್ನು ತುಂಬಾ ಶ್ರದ್ಧೆಯಿಂದ ನಿರ್ವಹಿಸಿದ್ದರು. ಅವರು ಅತ್ಯಂತ ವಿನಮ್ರ ವ್ಯಕ್ತಿಯಾಗಿದ್ದರು ಮತ್ತು ದೀರ್ಘಕಾಲದವರೆಗೆ ಸೇವೆ ಮಾಡಲು ಅವಕಾಶವನ್ನು ಪಡೆದರು ಮತ್ತು ಅವರು ಸೇವೆಯ ಹಕ್ಕನ್ನು ಪಾವತಿಸಿದರು.

ಅವರ ಹೆಸರು ಮುನವ್ವರ್ ಅಹ್ಮದ್ ಖುರ್ಷಿದ್ ಸಾಹಿಬ್. ಪಶ್ಚಿಮ ಆಫ್ರಿಕಾದಲ್ಲಿ ಮುಬಲ್ಲಿಗ್ ಆಗಿದ್ದರು. ಅವರು ಇತ್ತೀಚಿನ ದಿನಗಳಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್** ಅವರ ಕುಟುಂಬದಲ್ಲಿ ಅಹ್ಮದೀಯತ್ ಅವರ ಅಜ್ಜ ಹಝ್ರತ್ ಮಿಯಾನ್ ಅಬ್ದುಲ್ ಕರೀಮ್ ಸಾಹಿಬ್ ಅವರ ಮೂಲಕ ಪ್ರವೇಶಿಸಿತು. ಅವರು 1903ರಲ್ಲಿ ಕರಮ್ ದೀನ್‌ನ ಪ್ರಕರಣದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ಜೆಹ್ಲಮ್ ಪಟ್ಟಣದಲ್ಲಿ ಭೇಟಿ ನೀಡಿದಾಗ ಬೈಅತ್ ಮಾಡಿದರು. ಮೌಲ್ವಿ ಖುರ್ಷೀದ್ ಸಾಹಿಬ್ ಅವರ ಪೋಷಕರು ಹೊಂದಿದ್ದ ಪ್ರತಿಯೊಂದು ಮಗುವೂ ಅನಾರೋಗ್ಯಕ್ಕೆ ಒಳಗಾಗಿ ಮರಣ ಹೊಂದುತ್ತಿತ್ತು. ನಿಮ್ಮ ಜನನವಾದಾಗ ನೀವು ಅನಾರೋಗ್ಯಕ್ಕೆ ಒಳಗಾದಾಗ ಅವರಿಗೆ ಯಾವುದೇ ದಾರಿ ತೋರಲಿಲ್ಲ ಆದ್ದರಿಂದ ಅವರ ಅಜ್ಜ ಮಿಯಾಂ ಅಬ್ದುಲ್ ಕರೀಮ್ ಸಾಹಿಬ್ ಸಹಾಬಿಯೂ ಆಗಿದ್ದರು ಅವರು ಈ ಮಗುವನ್ನು ಅಲ್ಲಾಹನ ಮಾರ್ಗಕ್ಕೆ ಅರ್ಪಿಸಲು ನಿರ್ಧರಿಸಿದರು. ಅಲ್ಲಾಹನಿಗೆ ಬೇಕಾದರೆ ತಾನೇ ಕಾಪಾಡುತ್ತಾನೆ ಎಂದು ಯೋಚಿಸಿದರು. ಆದರೆ, ಅದೇ ವೇಳೆ ದೂರದ ಹಳ್ಳಿಯ ನಿವಾಸಿಯಾಗಿದ್ದ ವೈದ್ಯರೊಬ್ಬರು ಅವರ ಗ್ರಾಮಕ್ಕೆ ಬಂದು ಆ ಮಗುವಿಗೆ ಚಿಕಿತ್ಸೆ ನೀಡಿದ್ದು, ಅಲ್ಲಾಹನು ಪವಾಡದ ರೀತಿಯಲ್ಲಿ ಅವರಿಗೆ ಆರೋಗ್ಯವನ್ನು ನೀಡಿದನು. ಅವರ ಮಾವ ಮುಹಮ್ಮದ್ ಖಾನ್ ಸಾಹಿಬ್ ದರ್ವೀಶ್ ಅವರು ತುಂಬಾ ಎತ್ತರವಾದ ಮತ್ತು ಪ್ರಕಾಶಮಾನವಾದ ಮಿನಾರ್‌ನಲ್ಲಿದ್ದಾರೆ ಎಂದು ಅವರ ಬಗ್ಗೆ ಕನಸು ಕಂಡಿದ್ದರು ಮತ್ತು ಈ ದರ್ವೀಶ್ ಸಾಹಿಬ್ ಅವರಿಗೆ ಇವರು ಅಹ್ಮದಿಯತ್‌ನ ಮೀನಾರ್‌ಗಳನ್ನು (ಗೋಪುರಳನ್ನು) ಅತ್ಯಂತ ಪ್ರಕಾಶಮಾನವಾಗಿ ಮಾಡುತ್ತಾರೆ ಮತ್ತು ಅಹ್ಮದಿಯತ್‌ನ ಸೇವೆಯು ತುಂಬಾ ಮಾಡಲು ಸೌಭಾಗ್ಯ ಪಡೆಯುತ್ತಾರೆ ಎಂದು ತಿಳಿಸಲಾಯಿತು. ಹೀಗೆ ಸರ್ವಶಕ್ತನಾದ ಅಲ್ಲಾಹನು ಅವರಿಗೆ ಹೀಗೆ ಮಾಡುಲು ತೌಫೀಖ್ ನೀಡಿದನು.

ಜಾಮಿಯಾದಿಂದ ಪದವಿ ಪಡೆದರು, ಪಾಕಿಸ್ತಾನದಲ್ಲಿ ಸ್ವಲ್ಪ ಕಾಲ ಇದ್ದರು. ನಂತರ 1983 ರಲ್ಲಿ ಅವರು ಆಫ್ರಿಕಾಕ್ಕೆ ಹೋದರು, ಅವರು ಗ್ಯಾಂಬಿಯಾ ಮತ್ತು ಸೆನೆಗಲ್ ಇತ್ಯಾದಿಗಳಲ್ಲಿ ಸುದೀರ್ಘ ಸೇವೆಗಳನ್ನು ಸಲ್ಲಿಸಿದ್ದಾರೆ. ಅವರು ಸೆನೆಗಲ್, ಗ್ಯಾಂಬಿಯಾದಲ್ಲಿ ಅಮೀರ್ ಆಗಿ ಸೇವೆ ಸಲ್ಲಿಸಿದರು. ನಂತರ ಅವರು ಅನಾರೋಗ್ಯದ ಕಾರಣ 2005 ರಲ್ಲಿ ಯು.ಕೆಗೆ ಬಂದರು, ಆದರೆ ಸಾಮಾನ್ಯ ತರಬೇತುದಾರ ಅಲ್ಲಿಗೆ ಹೋಗಿ ನಿಯಮಿತ ವ್ಯವಸ್ಥೆಯನ್ನು ಸ್ಥಾಪಿಸುವವರೆಗೆ, ಅವರು ಇಲ್ಲಿಂದ ಸೆನೆಗಲ್ ಜಮಾಅತ್‌ನ ವ್ಯವಸ್ಥೆಯನ್ನು ನಡೆಸುತ್ತಿದ್ದರು. ನಂತರ, ಈ ಅವಧಿಯಲ್ಲಿ, 2008 ರಿಂದ 2012 ರವರೆಗೆ, ಅವರು ಯುಕೆ ಜಾಮಿಯ ಅಹ್ಮದೀಯಾದಲ್ಲಿ ಪ್ರಧ್ಯಾಪಕರಾಗಿ ಸೇವೆ ಸಲ್ಲಿಸಲು ಸಾಧ್ಯವಾಯಿತು. ಅವಕಾಶ ಸಿಕ್ಕಲ್ಲೆಲ್ಲಾ ಅದ್ಭುತ ಕೆಲಸ ಮಾಡಿದ್ದಾರೆ. ಅವರು ಅನೇಕ ಬೈಅತ್‌ಗಳಿಂದ ಅನುಗ್ರಹಿಸಲ್ಪಟ್ಟರು. ಸಂಸತ್ತಿನ ನಲವತ್ತು ಸದಸ್ಯರು ಅಹ್ಮದಿಯತ್ ಅನ್ನು ಅವರ ಮೂಲಕ ಸ್ವೀಕರಿಸಿದರು ಮತ್ತು ಈ ಯಶಸ್ಸಿಗಾಗಿ, ಹಝ್ರತ್ ಖಲೀಫತುಲ್ ಮಾಸಿಹ್ ರಾಬಿ(ರಹ) ಅವರು ಅವರನ್ನು ಜಲ್ಸಸ ಸಾಲಾನದ ಭಾಷಣೆಯಲ್ಲಿ ಅವರಿಗೆ "ಫಾತೆಹ್ ಸೆನೆಗಾಲ್" (ಸೆನೆಗಲ್ ವಿಜಯಶಾಲಿ) ಎಂಬ ಬಿರುದನ್ನು ನೀಡಿದರು. ಅವರು ಒಂದು ವರ್ಷ 15 ಅಸೆಂಬ್ಲಿ ಸದಸ್ಯರನ್ನು ಜರ್ಮನಿಯ ಜಲ್ಸ ಸಾಲಾನದಲ್ಲಿ ಕರೆತಂದರು. ನಂತರ ವಿವಿಧ ಮುರಬ್ಬಿಗಳಿಗೆ ಹೊಂದಿಸಲಾದ PAMA ಪ್ರಶಸ್ತಿಗಳು ಇವೆ, ಅವರು ಅಬ್ದುಲ್ ರಹೀಮ್ ನೈಯರ್ ಸಾಹಿಬ್ ಪ್ರಶಸ್ತಿಯನ್ನು ಸಹ ಪಡೆದರು. ನನ್ನ ಕೋರಿಕೆಯ ಮೇರೆಗೆ ಅವರು ಸ್ಪೇನ್‌ಗೆ ಹೋಗಿದ್ದಾರೆ. ಅವರು ಅಲ್ಲಿ ವಾಸಿಸುವ ಆಫ್ರಿಕನ್ನರ ನಡುವೆ ಬೋಧಿಸಿದರು ಮತ್ತು ಉತ್ತಮ ಕೆಲಸವನ್ನು ಮಾಡಿದರು. ಅಲ್ಲಿ ಅನೇಕ ಬೈಅತ್‌ಗಳನ್ನು ಸ್ವೀಕರಿಸಲಾಗಿದೆ. ಬ್ರಿಟನ್‌ನ ಅನ್ಸಾರುಲ್ಲಾಹ್‌ದ ವತಿಯಿಂದ ಆಯೋಜಿಸಲಾದ ಆನ್‌ಲೈನ್ ಅಲ್-ಖುರ್‌ಆನ್ ತರಗತಿಗಳನ್ನು ತೆಗೆದುಕೊಳ್ಳುವುದನ್ನು ಮುಂದುವರೆಸಿದರು. ಈ ಕೆಲಸವು ಅವರ ಮರಣದವರೆಗೂ ಮುಂದುವರೆಯಿತು. ಅವರು ಮೂವರು ಪುತ್ರರು ಹಾಗೂ ಮೂವರು ಪುತ್ರಿಯರು ಹಾಗೂ ಪತ್ನಿಯನ್ನು ಅಗಲಿದ್ದಾರೆ. ಅವರ ಓರ್ವ ಪುತ್ರ ಇಲ್ಲಿ ಯುಕೆಯಲ್ಲಿ ಮುರಬ್ಬಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಈಗ ಜಾಮಿಯಾ ಅಹ್ಮದಿಯಾ ಕೆನಡಾದ ಪ್ರಾಂಶುಪಾಲರಾಗಿರುವ ದಾವೂದ್ ಹನೀಫ್ ಸಾಹಿಬ್ ಅವರು ಆಫ್ರಿಕಾದ ಅಮೀರ್ ಆಗಿದ್ದರು ಇವರು ಅಲ್ಲಿಗೆ ಹೋದಾಗ. ಅವರು ಹೇಳುತ್ತಾರೆ 1983 ರಿಂದ 1994 ರವರೆಗೆ ಅವರ ಜೊತೆ ಸೇವೆ ಸಲ್ಲಿಸಲು ಅವಕಾಶ ಸಿಕ್ಕಿತು. ಮತ್ತು ತಬ್ಲೀಗ್‌ನೊಂದಿಗೆ ಇವರು ಶಾಲೆಯಲ್ಲಿ ಇಸ್ಲಾಂ ಧರ್ಮವನ್ನು ಕಲಿಸುತ್ತಿದ್ದರು. ಸೆನೆಗಲ್‌ನಲ್ಲಿ ತಬ್ಲೀಗ್ ಮಾಡುವ ಪರಿಸ್ಥಿತಿಗಳು ಹೇಗಿದ್ದವು ಎಂದರೆ ಅಲ್ಲಿ ಸುಲಭವಾಗಿ ತಬ್ಲೀಗ್ ಮಾಡಲು ಸಾಧ್ಯವಿರಲಿಲ್ಲ ಪರಿಸ್ಥಿತಿಗಳು ತುಂಬಾ ಕಷ್ಟಕರವಾಗಿತ್ತು. ಸೆನೆಗಲ್‌ನ ಗಡಿಯಲ್ಲಿರುವ ಫ್ರಾಫಿನಿ ಪಟ್ಟಣದಲ್ಲಿ 1985 ರ ಕೊನೆಯಲ್ಲಿ ಅವುಗಳನ್ನು ಬದಲಾಯಿಸಲಾಯಿತು ಎಂದು ಹೇಳಲಾಗುತ್ತದೆ. ಇಲ್ಲಿ ತಂಗುವ ಉದ್ದೇಶವು ಸೆನೆಗಲ್‌ನಲ್ಲಿ ಉಳಿಯುವ ಅಹ್ಮದೀಯರ ಯೋಜನೆಯಲ್ಲಿ ಯಶಸ್ವಿಯಾಗುವುದಾಗಿತ್ತು. ಇದು ತುಂಬಾ ಕಷ್ಟದ ಕೆಲಸವಾಗಿತ್ತು. ಸೆನೆಗಲೀಸ್ ಸರ್ಕಾರವು ಯಾವುದೇ ಪಾಕಿಸ್ತಾನಿಗಳಿಗೆ ವೀಸಾ ನೀಡಲಿಲ್ಲ, ಆದರೆ ಮೌಲ್ವಿ ಮುನವ್ವರ್ ಖುರ್ಷಿದ್ ಸಾಹಿಬ್ ಎಲ್ಲರೊಂದಿಗೆ ಬೆರೆಯುವ ಕೌಶಲ್ಯವು ಅವರು ಹೊಂದಿದ್ದರು, ಅವರು ಜನರೊಂದಿಗೆ ಬೆರೆತು ಚೆನ್ನಾಗಿ ಸಂಬಂಧಗಳನ್ನು ನಿರ್ಮಿಸಿದರು. ಆಗ ಅವರಿಗೆ ಸ್ವಲ್ಪ ಮಟ್ಟಿಗೆ ಫ್ರೆಂಚ್ ಭಾಷೆಯೂ ಗೊತ್ತಿತ್ತು. ಆದ್ದರಿಂದ ಅವರನ್ನು ಅಲ್ಲಿಗೆ ನಿಯೋಜಿಸಿದಾಗ, ಅವರು ಶೀಘ್ರದಲ್ಲೇ ಗಡಿಯಲ್ಲಿನ ಅಧಿಕಾರಿಗಳೊಂದಿಗೆ ಸಂಬಂಧವನ್ನು ಸ್ಥಾಪಿಸಿದರು. ನಂತರ ಈ ಸಂಬಂಧಗಳಿಂದಾಗಿ, ಅವರು ಸೆನೆಗಲ್‌ಗೆ ಬರಲು ಪ್ರಾರಂಭಿಸಿದರು ಮತ್ತು ನಂತರ ಅವರು ಅಲ್ಲಿನ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರ ಮೂಲಕ ಹೆಚ್ಚು ಫ್ರೆಂಚ್ ಕಲಿಯಲು ಪ್ರಾರಂಭಿಸಿದರು ಏಕೆಂದರೆ ಅವರು ಅಲ್ಲಿನ ಮುಖ್ಯೋಪಾಧ್ಯಾರಾದ ಅಬ್ದುಸ್ಸಲಾಮ್ ಸಾಹಿಬ್ ಅವರೊಂದಿಗೆ ಕುಳಿತು ಫ್ರೆಂಚ್ ಭಾಷೆಯನ್ನು ಕಲಿಯಬಹುದು ಎಂದು ಅಲ್ಲಿನ ಸ್ಥಳೀಯ ಅಧಿಕಾರಿಗಳಿಂದ ಅನುಮತಿ ಪಡೆದರು. ಆದಾಗ್ಯೂ, ಇದು ಯಶಸ್ವಿಯಾಯಿತು ಮತ್ತು ಹೀಗಾಗಿ ಅವರು ನಿಯತಕಾಲಿಕವಾಗಿ ಸೆನೆಗಲ್‌ಗೆ ಭೇಟಿ ನೀಡುವುದನ್ನು ಮುಂದುವರೆಸಿದರು. ನಂತರ ವಿಶೇಷ ರೀತಿಯ ಪಾಸ್ ಇತ್ತು ಮತ್ತು ಅವರು ಸಿಲಡಿಯಲ್ಲಿ, ಗ್ಯಾಂಬಿಯನ್ ವಾಹನಗಳು ಸೆನೆಗಲ್‌ಗೆ ಹೋಗಬಹುದಾಗಿತ್ತು. ಅವರು ಅದರಲ್ಲಿ ಜಮಾಅತ್‌ನ ಸಾಹಿತ್ಯವನ್ನು ಒಯ್ಯುತ್ತಿದ್ದರು, ಅಲ್ಲಿ ಪ್ರಚಾರ ಮಾಡಿದರು ಮತ್ತು ಅದರ ಮೂಲಕ ಅವರು ಅನೇಕ ಬೈಅತ್‌ಗಳನ್ನು ಮಾಡಿದರು. ಕೌಲಿಕ್ ಪ್ರದೇಶದಲ್ಲಿ ಆಗಲೇ ವಿವಿಧ ಅಹ್ಮದಿಯರು ಇದ್ದರು. ಸ್ಥಳೀಯ ಮುಬಲ್ಲಿಗ್ ಸಾಹಿಬ್ ಹಮೀದಂಬಾಯಿ ಸಾಹಿಬ್ ಇದ್ದರು, ಮತ್ತು ನಂತರ ಅವರು ಕೆಲಸ ಮಾಡಿದರು ಮತ್ತು ಮುಬಲ್ಲಿಗ್‌ರ ಮೂಲಕ ಹೆಚ್ಚಿನ ಜಮಾಅತ್‌ಗಳು ಅಲ್ಲಿ ಹರಡಿದವು. ಆಫ್ರಿಕಾದಲ್ಲಿ ರಸ್ತೆಗಳಿಲ್ಲ, ಮುರಿದ ರಸ್ತೆಗಳು ಅಥವಾ ಕಚ್ಚಾ ರಸ್ತೆಗಳಿಲ್ಲ, ಕೆಲವು ಸ್ಥಳಗಳಲ್ಲಿ ರಸ್ತೆಗಳಿಲ್ಲ, ಆದರೆ ಅವರು ಬೈಕಿನಲ್ಲಿ ದೂರದ ಪ್ರದೇಶಗಳನ್ನು ತಲುಪಿದರು, ಮತ್ತು ಬೈಕು ಮಾರ್ಗವು ಈ ಟ್ರ್ಯಾಕ್‌ಗಳ ಹತ್ತಿರಕ್ಕೆ ಪೊದೆಗಳು ಬಂದವು. ಅದರಿಂದಾಗಿ ಅವರಿಗೆ ಬಹಳ ರಕ್ತಸ್ರಾವವು ಆಗುತ್ತಿತ್ತು ಆದರೆ ಅವರು ಎಂದಿಗೂ ಕಾಳಜಿ ವಹಿಸಲಿಲ್ಲ ಮತ್ತು ಅವರ ಕೆಲಸದಲ್ಲಿ ಮಗ್ನರಾಗಿದ್ದರು.

ಮತ್ತೆ ದಾವೂದ್ ಹನೀಫ್ ಸಾಹಿಬ್ ಬರೆಯುತ್ತಾರೆ, ಆರಂಭದಲ್ಲಿ ಇದು ತುಂಬಾ ಕಷ್ಟಕರವಾದ ಕೆಲಸವಾಗಿತ್ತು. ನಾವು ಬಹಳ ಎಚ್ಚರಿಕೆಯಿಂದ ತಬ್ಲೀಗ್ ಮಾಡಿದೆವು. ನಂತರ ಕ್ರಮೇಣ, ಸಂಬಂಧಗಳನ್ನು ಸ್ಥಾಪಿಸಿದಾಗ, ಜಮಾಅತ್ ಅನ್ನು ಪರಿಚಯಿಸಲಾಯಿತು ಮತ್ತು ಇಸ್ಲಾಂನ ಪುನರುಜ್ಜೀವನಕ್ಕಾಗಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ಕಳುಹಿಸಲಾಗಿದೆ ಎಂಬ ಸುದ್ದಿಯನ್ನು ಜನರಿಗೆ ತಿಳಿಸಲು ಪ್ರಾರಂಭಿಸಿತು ಮತ್ತು ಈ ಸಂದೇಶವು ಅಧಿಕಾರಿಗಳಿಗೆ ತಲುಪಲು ಪ್ರಾರಂಭಿಸಿತು. ಇದು ಸೆನೆಗಲ್‌ನಲ್ಲಿ ಬಂದು ಹೋಗಲಾರಂಭಿಸಿತು. ನಿಯಮಿತ ಭೇಟಿಗಳನ್ನು ಮಾಡುತ್ತಿದ್ದರು ಮತ್ತು ಆದ್ದರಿಂದ ಜಮಾಅತ್ ಕೌಲಾಕ್ ಪ್ರದೇಶದ ಹೆಚ್ಚಿನ ಜನಸಂಖ್ಯೆಯಲ್ಲಿ ಪ್ರಭಾವವನ್ನು ಗಳಿಸಿತು. ಹಲವಾರು ಜಮಾಅತ್‌ಗಳು ಹುಟ್ಟಿಕೊಂಡವು. ಅವುಗಳು

ಹೆಚ್ಚಾಗತೊಡಗಿದವು. ಮತ್ತು ಮೋಟರ್ ಸೈಕಲ್ ಬಗ್ಗೆ ಹೇಳಿದ್ದೇನೆ, ಕೆಲವೆಡೆ ದ್ವಿಚಕ್ರವಾಹನ ಇತ್ಯಾದಿ ಸಿಗದ ಹಳ್ಳಿಗಳಿದ್ದು, ಗಾಡಿ, ಕತ್ತೆ ಗಾಡಿಗಳಲ್ಲಿ ಕೂತು ದೂರ ಪ್ರಯಾಣ ಮಾಡಿ ಬೇರೆ ಬೇರೆ ಊರುಗಳನ್ನು ತಲುಪಿದ್ದೇವೆ ಎಂದು ಬರೆದಿದ್ದಾರೆ. ಈಗ ಅಲ್ಲಿಗೆ ಹೋದಾಗ ಅಲ್ಲಿದ್ದವರು ಹೇಳಿದರು. ಮೌಲಾನಾ ಮುನವ್ವರ್ ಖುರ್ಷಿದ್ ಸಾಹಿಬ್ ಅವರು ಬಹಳ ಹಿಂದೆಯೇ ನಮ್ಮನ್ನು ಇಲ್ಲಿಗೆ ಭೇಟಿ ನೀಡುತ್ತಿದ್ದರು ಮತ್ತು ಬಹಳ ಕಷ್ಟದ ಸಂದರ್ಭಗಳಲ್ಲಿ ನಮ್ಮನ್ನು ಭೇಟಿಯಾಗುತ್ತಿದ್ದರು ಮತ್ತು ಅಲ್ಲಿ ವಾಸಿಸುತ್ತಿದ್ದರು ಮತ್ತು ಬೋಧನೆ ಮಾಡುತ್ತಿದ್ದರು. ಅವರು ಅಲ್ಲಿ ರಾತ್ರಿಗಳನ್ನು ಜನರ ನಡುವೆ ಕಳೆಯುತ್ತಿದ್ದರು ಮತ್ತು ತಮ್ಮ ಬೇಯಿಸಿದ ಚೆರಿ ಅಥವಾ ರಾಗಿ ಕುದಿಯುವ ನೀರಿನಿಂದ ತಮ್ಮ ಆಹಾರವನ್ನು ತಿನ್ನುತ್ತಿದ್ದರು. ಇದು ಅವರ ಏಕೈಕ ಆಹಾರವಾಗಿತ್ತು ಮತ್ತು ನಂತರ ಅವರು ತಬ್ಲೀಗ್ ಅನ್ನು ಮುಂದುವರೆಸಿದರು, ವಾಸಿಸಲು ಉತ್ತಮ ಸ್ಥಳವಿದೆಯೇ ಅಥವಾ ಇಲ್ಲವೇ ಎಂದು ಎಂದಿಗೂ ಚಿಂತಿಸಲಿಲ್ಲ. ಆಹಾರ ಲಭ್ಯವಿದೆಯೋ ಇಲ್ಲವೋ. ಲಭ್ಯವಿರುವ ಸ್ಥಳದಲ್ಲಿ ತಂಗಿದರು ಸಿಕ್ಕಿದ ಆಹಾರವನ್ನು ಸೇವಿಸಿದರು ಹೀಗೆ ಅವರು ಜನರಲ್ಲಿ ಬಹಳ ಜನಪ್ರಿಯರಾದರು. ಅವರೂ ಚೆನ್ನಾಗಿ ತಬ್ಲೀಗ್ ಸಹ ಮಾಡಿದ್ದಾರೆ.

ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ) ಅವರು ಒಂದು ದೈವದರ್ಶನವನ್ನು ಕಂಡರು ಅದರಲ್ಲಿ ಅವರು ಫ್ರೆಂಚ್ ಮಾತನಾಡುವ ದೇಶಗಳಲ್ಲಿ ಜಮಾಅತ್ ಪ್ರಗತಿಯಲ್ಲಿದೆ ಎಂಬ ದೃಷ್ಟಿಯನ್ನು ಕಂಡಾಗ, ಅವರು ತಾವು ಇದ್ದ ಪ್ರದೇಶವನ್ನು ತೊರೆದು ಸೆನೆಗಲ್‌ನತ್ತ ಗಮನ ಹರಿಸಿದರು. ಅವರನ್ನು ಅಲ್ಲಿಗೆ ಕಳುಹಿಸಲಾಯಿತು, ಅಲ್ಲಿನ ಪ್ರಭಾವಿ ವ್ಯಕ್ತಿಗಳಿಗೆ ಬೋಧಿಸಲಾಯಿತು ಮತ್ತು ಸಂಸತ್ತಿನ ಸದಸ್ಯರಿಗೆ ಬೋಧಿಸಲಾಯಿತು ಮತ್ತು ಹದಿನಾಲ್ಕು ಸಂಸತ್ ಸದಸ್ಯರು ಬೈಅತ್ ಮಾಡಲು ಮನವೊಲಿಸಿದರು. ಅದರ ಪರಿಣಾಮ ಜಮಾಅತ್ ಮೇಲೂ ತುಂಬಾ ಚೆನ್ನಾಗಿತ್ತು ನಂತರ ಅಲ್ಲಿಯೂ ಜಮಾಅತ್ ಗಟ್ಟಿಯಾಗತೊಡಗಿತು. ಜಮಾಅತ್‌ನ ವ್ಯವಸ್ಥೆಯನ್ನು ಬಲಪಡಿಸಲು ಮುಬಲ್ಲಿಗರ ಸಂಖ್ಯೆ ಹೆಚ್ಚಳದ ಜೊತೆಗೆ ಶಿಕ್ಷಣ ಮತ್ತು ತರಬೇತಿಯ ಅಗತ್ಯತೆ ಇದ್ದುದರಿಂದ ಈ ಕಾರ್ಯಕ್ರಮವನ್ನು ವಾರ್ಷಿಕ ಆಧಾರದ ಮೇಲೆ ಮುಂದುವರೆಸಲಾಯಿತು ಮತ್ತು ಮೌಲಾನಾ ಸಾಹೇಬರು ಈ ಕೆಲಸವನ್ನು ಅತ್ಯಂತ ಧೈರ್ಯದಿಂದ ನಿರ್ವಹಿಸಿದರು. 1997 ರಲ್ಲಿ, ಅವರು ಸೆನೆಗಲ್‌ನ ಅಮೀರ್ (ರಾಷ್ಟ್ರಾಧ್ಯಕ್ಷ) ಆಗಿ ನೇಮಕಗೊಂಡರು. ಅವರು ಕೊನೆಯ ಸಮಯದವರೆಗೆ ತಮ್ಮ ಸೇವೆಯನ್ನು ಬಹಳ ಪ್ರಯತ್ನದಿಂದ ಮಾಡಿದರು. ಕಾಲಘಟ್ಟದ ಖಲೀಫರಿಗೆ ವಿಧೇಯತೆಯ ಮನೋಭಾವವು ಪ್ರೀತಿಯಿಂದ ತುಂಬಿತ್ತು ಎಂದು ಅವರು ಬರೆದಿದ್ದಾರೆ ಮತ್ತು ವಾಸ್ತವವಾಗಿ ನಾನು ಇಲ್ಲಿಗೆ ಬಂದಾಗ ಇದನ್ನು ನೋಡಿದ್ದೇನೆ. ಹತ್ತು ವರ್ಷಗಳಿಂದ ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದ ಅವರು ಅನಾರೋಗ್ಯದ ಸಂದರ್ಭದಲ್ಲೂ ಅವರಿಗೆ ಯಾವುದೇ ಕೆಲಸವನ್ನು ನೀಡಿದಾಗ ಅದನ್ನು ತಕ್ಷಣವೇ ಮಾಡಲು ಪ್ರಯತ್ನಿಸುತ್ತಿದ್ದರು.

ಅವರು ತಬ್ಲೀಗ್ ಅನ್ನು ಬಹಳ ಇಷ್ಟಪಡುತ್ತಿದ್ದರು. ಅಲ್ಲಿ ಸೆನೆಗಲ್ ನಲ್ಲಿ ವಾಜಿಉಲ್ಲಾ ಸಾಹೇಬರು ಮುಬಲ್ಲಿಗ್ ಆಗಿದ್ದಾರೆ. ಅವರು ಹೇಳುತ್ತಾರೆ: ನಾನು ಇಲ್ಲಿಗೆ ಬಂದಾಗ ಮುನವ್ವರ್ ಸಾಹೇಬರ ಹೆಸರು ಬಹಳ ಕೇಳಿದೆ ಎನ್ನುತ್ತಾರೆ. ಮತ್ತು ಅವರು ಹೋದಲ್ಲೆಲ್ಲಾ ಜನರು ಅವರನ್ನು ಬಹಳ ಪ್ರೀತಿಯಿಂದ ಉಲ್ಲೇಖಿಸುತ್ತಿದ್ದರು.

ಸ್ಥಳೀಯ ಮುಅಲ್ಲಿಮ್ ಸಾಹೇಬರು ಕೆಲವು ಘಟನೆಗಳನ್ನು ವಿವರಿಸುತ್ತಾರೆ. ಮುಹಮ್ಮದು ತಫ್ಸೀರ್ ಮಾರಾ ಸಾಹಿಬ್ ಸ್ಥಳೀಯ ಮುಅಲ್ಲಿಮರು. ಮುನವ್ವರ್ ಖುರ್ಷಿದ್ ಸಾಹಿಬ್ ಅವರ ಮೂಲಕ ನಾನು ಅಹ್ಮದಿಯಾ ಜಮಾಅತ್ ಅನ್ನು ಸ್ವೀಕರಿಸಿದ್ದೇನೆ ಮತ್ತು ಅವರು ನನಗೆ ಉತ್ತಮ ಶಿಕ್ಷಣವನ್ನು ನೀಡಿದರು ಮತ್ತು ಅವರು ನನಗೆ ಸಾಕಷ್ಟು ಕಠಿಣ ಪರಿಶ್ರಮ ಮತ್ತು ಪ್ರೀತಿಯಿಂದ ತರಬೇತಿ ನೀಡಿದರು, ಅದರ ಪರಿಣಾಮವಾಗಿ ನಾನು ಜಾಮಿಯಾ ಅಹ್ಮದಿಯಾ ಘಾನಾದಲ್ಲಿ ಅಧ್ಯಯನ ಮಾಡಿ ಜಮಾಅತ್ ಸೇವೆ ಮಾಡುವ ಅವಕಾಶವನ್ನು ಪಡೆದುಕೊಂಡಿದ್ದೇನೆ ಎಂದು ಅವರು ಹೇಳುತ್ತಾರೆ. ನಾನು ಅವರೊಂದಿಗೆ ಬಹಳ ಸಮಯ ಕಳೆದಿದ್ದೇನೆ ಎಂದು ಅವರು ಹೇಳುತ್ತಾರೆ. ಇವರು ಬರೆಯುತ್ತಾರೆ. ಅವರು ಖಿಲಾಫತ್ ಅನ್ನು ಪ್ರೀತಿಯ ಮಟ್ಟಿಗೆ ಪ್ರೀತಿಸುತ್ತಿದ್ದರು ಮತ್ತು ಅವರು ಖಿಲಾಫತ್ಗೆ ಸಂಬಂಧಿಸುವುದಕ್ಕಾಗಿ ಈ ವಿಶೇಷ ವಿಷಯಗಳನ್ನು ನನಗೆ ಹೇಳುತ್ತಿದ್ದರು ಎಂದು ಅವರು ಹೇಳುತ್ತಾರೆ. ಎರಡನೆಯ ವಿಷಯವೆಂದರೆ, ಅವರು ಎಂದಿಗೂ ತಹಜ್ಜುದ್ ಅನ್ನು ಬಿಟ್ಟು ಹೋಗಲಿಲ್ಲ ಮತ್ತು ಯಾವಾಗಲೂ ತಹಜ್ಜುದ್ ಅನ್ನು ಪಠಿಸುವಂತೆ ಮತ್ತು ವಿಶೇಷವಾಗಿ ಖಲೀಫತುಲ್ ಮಸೀಹ್ ಗಾಗಿ ಪ್ರಾರ್ಥಿಸಬೇಕೆಂದು ಅವರು ನಮಗೆ ಕಿವಿ ಮತು ಹೇಳುತ್ತಿದ್ದರು. ಅದೇ ಮುಅಲ್ಲಿಮ್ ಸಾಹೇಬರು ಅವರು ತುಂಬಾ ಧರ್ಮನಿಷ್ಠ ವ್ಯಕ್ತಿಯಾಗಿದ್ದರು ಎಂದು ಬರೆಯುತ್ತಾರೆ, ಅವರು ಕಠಿಣ ಪರಿಶ್ರಮಿ, ಅವರು ಸೆನೆಗಲ್‌ನಾದ್ಯಂತ ಪ್ರಯಾಣಿಸಿದರು. ಪ್ರತಿ ಗ್ರಾಮಕ್ಕೂ ತೆರಳಿ ಮಸೀಹ್ ಮೊಹಮ್ಮದಿ ಅವರ ಸಂದೇಶ ಸಾರುವ ಪ್ರಯತ್ನ ನಿರಂತರವಾಗಿ ನಡೆಯುತ್ತಿದೆ. ಮುನವ್ವರ್ ಸಾಹೇಬರು ಜಮಾಅತ್‌ನ ಕೆಲಸದಲ್ಲಿ ನಿರತರಾಗಿದ್ದಾಗ ಹಗಲು ರಾತ್ರಿ ಅನ್ನ-ಪಾನೀಯಗಳ ಬಗ್ಗೆ ತಲೆಕೆಡಿಸಿಕೊಂಡಿರಲಿಲ್ಲ ಎಂಬುದಕ್ಕೆ ನಾನು ಸಾಕ್ಷಿಯಾಗಿದ್ದೇನೆ ಎನ್ನಲಾಗಿದೆ. ಅವರು ಸರ್ವಶಕ್ತನಾದ ಅಲ್ಲಾಹನೊಂದಿಗೆ ಬಹಳ ನಿಕಟ ಸಂಬಂಧವನ್ನು ಹೊಂದಿದ್ದರು. ಆಗಾಗ್ಗೆ ಗಮನಿಸಲಾಗಿದೆ. ಒಮ್ಮೆ ಜಮಾಅತ್‌ನ ಕಾರ್ಯಕ್ರಮವಿದ್ದು, ಜನ ಅಲ್ಲಿಗೆ ಬಂದಿದ್ದರು. ಓರ್ವ ಅಹ್ಮದಿ ಅಲ್ಲಿ ಅನಾರೋಗ್ಯಕ್ಕೆ ಒಳಗಾದನು ಮತ್ತು ಆತನು ಹಿಂತಿರುಗಲು ಬಯಸಿದನು. ಅದಕ್ಕೆ ಅವರು ಅವಕಾಶ ಮಾಡಿಕೊಟ್ಟರು ಆ ಅಹ್ಮದಿಯು ಬಸ್ಸಿನಲ್ಲಿ ಸ್ಥಳವನ್ನು ಕಂಡುಕೊಂಡು ಕುಳಿತುಕೊಳ್ಳಲು ಹೋದಾಗ, ಮುನವ್ವರ್ ಸಾಹೇಬರು ಆತನನ್ನು ಈ ಬಸ್ಸಿನಲ್ಲಿ ಕುಳಿತುಕೊಳ್ಳದಂತೆ ತಡೆದು ಇನ್ನೊಂದು ಬಸ್ಸಿನಲ್ಲಿ ಕುಳಿತುಕೊಳ್ಳಲು ಹೇಳಿದರು. ಆಗ ನನ್ನ ಮನದಲ್ಲಿ ಈ ಬಸ್ಸಿಗೆ ಅವಘಡ ಸಂಭವಿಸಲಿದೆ ಎಂಬ ಕಲ್ಪನೆ ಇತ್ತು ಮತ್ತು ಈ ರೀತಿ ನಡೆದರೆ ಅವರು ಜಮಾಅತ್‌ನ ಕಾರ್ಯಕ್ರಮಕ್ಕೆ ಹೋಗಿ ಅಪಘಾತವಾಗಿ ಸಾವನ್ನಪ್ಪಿದ್ದಾರೆ ಎಂದು ಜನರು ಹೇಳುತ್ತಾರೆ. ಆದರೆ, ಅದೇ ಸಂಭವಿಸಿದ್ದು, ನಿಲ್ಲಿಸಿದ್ದ ಬಸ್ ಅಪಘಾತಕ್ಕೀಡಾಗಿದೆ. ಮತ್ತೊಂದು ಬಸ್ಸಿನಲ್ಲಿ ಅವರು ಕುಳಿತಿದ್ದಾಗ ಆ ವ್ಯಕ್ತಿ ಸುರಕ್ಷಿತವಾಗಿ ತನ್ನ ಮನೆಗೆ ಬಂದು ಸೇರಿದನು. ಈ ಕಾರಣದಿಂದಾಗಿ, ಜನರ ನಂಬಿಕೆಯು ಹೆಚ್ಚಾಯಿತು ಮತ್ತು ಜನರಲ್ಲಿ ಎಂತಹ ಪ್ರೀತಿಯ ಸ್ಥಿತಿಯಿದೆ ಎಂದರೆ ಅವರ ನಮಾಝೆ ಜನಾಝವನ್ನು ಸೆನೆಗಲ್‌ನ ವಿವಿಧ ಸ್ಥಳಗಳಲ್ಲಿ ಜನಾಝ ಗಾಯಿಬ್ ಅನ್ನು ನಡೆಸಲಾಯಿತು. ಅಹಮದೀಯರಲ್ಲದವರು ಕೂಡ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದರು.

ಮತ್ತೆ ಫಾಟಕ್‌ನ ಅಧ್ಯಕ್ಷ ರೋಗನ್ ಫೈ ಸಾಹಿಬ್ ಹೇಳುತ್ತಾರೆ ಮುನವ್ವರ್ ಖುರ್ಷಿದ್ ಸಾಹಿಬ್ ಕೆಲಸ ಮಾಡುತ್ತಿದ್ದ ಭಕ್ತಿಯನ್ನು ಬೇರೆಯವರು ಮಾಡುವುದು ತುಂಬಾ ಕಷ್ಟ.

ಮತ್ತೆ ಜಾಲೂ ಸಾಹಿಬ್ ಸ್ಥಳೀಯ ಮುಅಲ್ಲಿಮ್ ಆಗಿದ್ದಾರೆ ಅವರು ಮೊದಲು ಸೆನೆಗಲ್‌ಗೆ ಬಂದಾಗ, ಮುನವ್ವರ್ ಸಾಹಿಬ್ ಅವರೊಂದಿಗೆ ದೀರ್ಘಕಾಲ ಕೆಲಸ ಮಾಡುವ ಅವಕಾಶ ಸಿಕ್ಕಿತು ಎಂದು ಅವರು ಹೇಳುತ್ತಾರೆ. ಅವರು ತುಂಬಾ ಧರ್ಮನಿಷ್ಠ ಮತ್ತು ಧೈರ್ಯಶಾಲಿ ವ್ಯಕ್ತಿತ್ವವನ್ನು ಹೊಂದಿದ್ದರು. ಜಮಾಅತ್ ಪ್ರವಾಸಗಳ ಸಮಯದಲ್ಲಿ, ಅವರು ಬಹಳ ಬುದ್ಧಿವಂತಿಕೆ ಮತ್ತು ಶೌರ್ಯದಿಂದ ತಬ್ಲೀಗ್‌ನ ಚಟುವಟಿಕೆಗಳನ್ನು ನಡೆಸುತ್ತಿದ್ದರು. ಅದೇ ರೀತಿ ಅವರು ಬಹಳ ನ್ಯಾಯಯುತವಾಗಿ ವರ್ತಿಸುತ್ತಿದ್ದರು. ಅವರು ಜಮಾಅತ್ ಅನ್ನು ಹೆಚ್ಚು ಪ್ರೀತಿ ಮತ್ತು ನ್ಯಾಯದಿಂದ ನಡೆಸಿಕೊಂಡರು.

ರಾಜಾ ಬುರ್ಹಾನ್ ಸಾಹಿಬ್ ಅವರು ಕೊನೆಯ ದಿನಗಳಲ್ಲಿ ಅನಾರೋಗ್ಯಕ್ಕೆ ಒಳಗಾದಾಗ, ಅವರ ಡಯಾಲಿಸಿಸ್ ಅನ್ನು ಪ್ರತಿದಿನ ಮಾಡಲಾಗುತ್ತಿತ್ತು ಎಂದು ಹೇಳುತ್ತಾರೆ. ಒಂದು ದಿನ ಅವರು ಮದುವೆಯಲ್ಲಿ ಭೇಟಿಯಾದಾಗ, ನಾನು ಅಂಗಡಿಯನ್ನು ತೆರೆದಿದ್ದೇನೆ ಎಂದು ಅವರು ಹೇಳುತ್ತಾರೆ. ಅಂಗಡಿ ತೆರೆಯುವುದರ ಅರ್ಥವೇನು ಎಂದು ನಾನು ಹೇಳಿದೆ? ಹಾಗಾಗಿ ಮನೆಯಲ್ಲಿದ್ದಾಗ ಮನೆಯ ಹೊರಗೆ ಮೇಜು ಹಾಕುತ್ತೇನೆ, ಬೇಸಿಗೆಯಲ್ಲಿ ನೀರು ಇಡುತ್ತೇನೆ, ಸಾಹಿತ್ಯ ಇಡುತ್ತೇನೆ, ಬಂದವರಿಗೆ ನೀರು ಬೇಕಾದರೆ ನೀರು ಕುಡಿಸಿ ಸಾಹಿತ್ಯ ನೀಡುತ್ತೇನೆ ಎಂದರು. ಹಾಗಾಗಿ ಹೀಗೆ ಸುಮ್ಮನೆ ಕೂರದೆ ಈ ಖಾಯಿಲೆಯಲ್ಲೂ ಹೊಸ ದಾರಿ ಕಂಡುಕೊಂಡರು. ಆದ್ದರಿಂದ, ಹೇಳುವವರು ಹೇಗೆ ಉಪದೇಶಿಸಬೇಕು? ಹುಡುಕಿದರೆ ಉಪದೇಶದ ಮಾರ್ಗಗಳು ಸಿಗುತ್ತವೆ, ಕೇವಲ ಉತ್ಸಾಹ ಇರಬೇಕು.

ತದನಂತರ ಮುನವ್ವರ್ ಖುರ್ಷೀದ್ ಸಾಹಿಬ್ ಅವರ ಕೌಶಲ್ಯವು ಅವರು ಭಾಷೆಯನ್ನು ತ್ವರಿತವಾಗಿ ಕಲಿಯುತ್ತಿದ್ದರು. ಗ್ಯಾಂಬಿಯಾದಲ್ಲಿ ವಿವಿಧ ಭಾಷೆಗಳನ್ನು ಮಾತನಾಡುತ್ತಾರೆ ಮತ್ತು ಇಲ್ಲಿ ಅಧ್ಯಯನ ಮಾಡಿದ ನಮ್ಮ ಮೂವರು ಗ್ಯಾಂಬಿಯನ್ ಬೋಧಕರಾದ ಅಬ್ದುಲ್ಲಾ ಸಾಹಿಬ್ ಮತ್ತು ಅಬ್ದುರ್ರಹ್ಮಾನ್ ಸಾಹಿಬ್ ಮತ್ತು ಮುಹಮ್ಮದ್ ಮುಬಾಯೆ ಸಾಹಿಬ್ ಅವರು ಮಾತನಾಡುತ್ತಿದ್ದರು ಮತ್ತು ಹೇಳುತ್ತಿದ್ದರು. ಈ ಮೂವರೂ ಬೇರೆ ಬೇರೆ ಬುಡಕಟ್ಟುಗಳಿಗೆ ಸೇರಿದವರು, ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ, ಆದರೆ ನನಗೆ ಈ ಮೂರು ಬುಡಕಟ್ಟುಗಳ ಭಾಷೆ ಗೊತ್ತು.

ಅವರ ಪತ್ನಿ ನುಸ್ರತ್ ಜಹಾನ್ ಸಾಹಿಬಾ ಹೇಳುತ್ತಾರೆ. ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಗಮನ ನೀಡಿದರು. ಅವರು ತುಂಬಾ ಪ್ರೀತಿಯ ಜೀವಿಯಾಗಿದ್ದರು. ಖಲೀಫರ ಬಗ್ಗೆ ಅಪಾರ ಪ್ರೀತಿ ಇತ್ತು. ವಕ್ಫ್ ಹಕ್ಕನ್ನು ಪಾವತಿಸಿದರು. ಅವರು ಭಿನ್ನಾಭಿಪ್ರಾಯಗಳನ್ನು ಅಳಿಸಿಹಾಕಲು ಮತ್ತು ಶಾಂತಿಯನ್ನು ಮಾಡಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು

ಮಾಡುತ್ತಿದ್ದರು. ಆತಿಥ್ಯ ಉತ್ತಮವಾಗಿತ್ತು. ಆಫ್ರಿಕಾಗೆ ಪ್ರವಾಸಕ್ಕೆ ಹೋದಾಗ, ನಾನು ಯಾವಾಗ ಬರುತ್ತೇನೆ ಎಂದು ನೀವು ನನ್ನ ಬಗ್ಗೆ ಚಿಂತಿಸಬೇಡಿ ಎಂದು ನಮಗೆ ಹೇಳುತ್ತಿದ್ದರು. ನಾನು ಕಾರ್ಯ ಮುಗಿಸಿದ ನಂತರ ನಾನು ಮನೆಗೆ ಹಿಂತಿರುಗುತ್ತೇನೆ. ತಬ್ಲೀಗ್ ಮಾಡುವುದು ಒಂದು ಉತ್ಸಾಹವಾಗಿತ್ತು ಎಂದು ಅವರು ಹೇಳುತ್ತಾರೆ. ಸ್ಪೇನ್‌ನಲ್ಲಿಯೂ ಸಾರಲು ಅವರಿಗೆ ಅನೇಕ ಅವಕಾಶಗಳಿದ್ದವು. ಅನಾರೋಗ್ಯದ ನಡುವೆಯೂ ಅವರು ಅಲ್ಲಿಗೆ ಹೋಗುವುದನ್ನು ಮುಂದುವರೆಸಿದರು. ಈ ರೀತಿಯಾಗಿ ಅವರು ಹಳೆಯ ಸಂಪರ್ಕಗಳನ್ನು ಮರುಸ್ಥಾಪಿಸಿದರು.

ಅವರ ಮಗ, ಮಿಷನರಿಯಾಗಿರುವ ಮುಹಮ್ಮದ್ ಅಹ್ಮದ್ ಖುರ್ಷಿದ್ ಹೇಳುತ್ತಾರೆ: "ನಾನು ಜನರಿಗೆ ಸಹಾಯ ಮಾಡಬೇಕೆಂದು ಅವರು ಯಾವಾಗಲೂ ನನಗೆ ಸಲಹೆ ನೀಡುತ್ತಿದ್ದರು, ಏಕೆಂದರೆ ಇದು ಅತ್ಯುತ್ತಮವಾದ ಆರಾಧನೆಯಾಗಿದೆ ಮತ್ತು ಅದು ಅಲ್ಲಾಹನನ್ನು ಮೆಚ್ಚಿಸುತ್ತದೆ." ಅವರು ಹೇಳುತ್ತಾರೆ: "ಅವರಲ್ಲಿ, ನಾವು ಯಾವಾಗಲೂ ಇಸ್ಲಾಮಿಕ್ ಬೋಧನೆಗಳ ಪ್ರಾಯೋಗಿಕ ಮಾದರಿಯನ್ನು ನೋಡಿದ್ದೇವೆ."

ಸ್ಪೇನ್‌ನಿಂದ ಸಲ್ಮಾನ್ ಸಲ್ಮಿ ಸಾಹಿಬ್ ಬರೆಯುತ್ತಾರೆ: “ಅವರು ಸ್ಪೇನ್‌ಗೆ ಭೇಟಿ ನೀಡಿದಾಗ, ಅನೇಕ ತಬ್ಲೀಗ್ ಪ್ರಯತ್ನಗಳಲ್ಲಿ ಅವರೊಂದಿಗೆ ಹೋಗಲು ನನಗೆ ಅವಕಾಶ ಸಿಕ್ಕಿತು. ನಾನು ನೋಡಿದ ಆಶ್ಚರ್ಯಕರ ವಿಷಯವೆಂದರೆ ಅವರು ಯಾವುದೇ ಆಫ್ರಿಕನ್ ದಾರಿಹೋಕನೊಂದಿಗೆ ಸಂಭಾಷಣೆಯನ್ನು ಹೊಡೆಯಲು ಮತ್ತು ಅವರನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ. ಕಡಿಮೆ ಸಮಯದಲ್ಲಿ, ಅವರು ಅವರೊಂದಿಗೆ ಉತ್ತಮ ಸಂಪರ್ಕವನ್ನು ರೂಪಿಸಲು ಸಾಧ್ಯವಾಗುತ್ತದೆ. ಆ ವ್ಯಕ್ತಿಯು ಅಂತಹ ಮತ್ತು ಅಂತಹ ಹಳ್ಳಿಯಿಂದ ಬಂದವನು ಮತ್ತು ಆ ಪ್ರದೇಶದ ಸುತ್ತಮುತ್ತಲಿನ ಹಳ್ಳಿಗಳು ಅಂತಹ ಮತ್ತು ಅಂತಹವು ಮತ್ತು ಆ ಜನರು ತುಂಬಾ ಪ್ರಾಮಾಣಿಕರು ಎಂದು ಅವರು ನಂತರ ಹೇಳುತ್ತಿದ್ದರು. ಅವರು ವಿವಿಧ ಪ್ರದೇಶಗಳ ಪ್ರಭಾವಿ ವ್ಯಕ್ತಿಗಳನ್ನು ತಿಳಿದಿದ್ದರು. ಅವರು ವಿವಿಧ ಆಫ್ರಿಕನ್ ಭಾಷೆಗಳಲ್ಲಿ ಸಂಭಾಷಣೆ ನಡೆಸುತ್ತಿದ್ದರಿಂದ, ಜನರು ಅವರ ಮಾತನ್ನು ಕೇಳಲು ಒಲವು ತೋರುತ್ತಿದ್ದರು. ಅವರು ಆಶ್ಚರ್ಯಚಕಿತರಾಗುತ್ತಾರೆ ಮತ್ತು ಸಂತೋಷಪಡುತ್ತಾರೆ. ಎರಡು ಅಥವಾ ಮೂರು ಸಭೆಗಳ ನಂತರ, ಅವರು ಅವರೊಂದಿಗೆ ಬಾಂಧವ್ಯವನ್ನು ಸ್ಥಾಪಿಸಿದರು ಮತ್ತು ನಂತರ ಅವರಿಗೆ ಜಮಾಅತ್‌ನ ಸಂದೇಶವನ್ನು ನೀಡುತ್ತಿದ್ದರು. ಅವರು ಮೊದಲ ಸಭೆಯಲ್ಲಿ ಅವರಿಗೆ ಉಪದೇಶ ಮಾಡುವುದಿಲ್ಲ ಎಂದು ಹೇಳುತ್ತಾರೆ; ಅವರು ಮೊದಲು ವೈಯಕ್ತಿಕ ಸಂಪರ್ಕವನ್ನು ಸ್ಥಾಪಿಸಿದರು ಮತ್ತು ನಂತರ ಎರಡನೇ ಅಥವಾ ಮೂರನೇ ಭೇಟಿಯಲ್ಲಿ, ಅವರು ಅಹ್ಮದೀಯತ್ ಬಗ್ಗೆ ಅವರಿಗೆ ಬೋಧಿಸುತ್ತಾರೆ. ಅವರ ವೈಯಕ್ತಿಕ ಸಂಪರ್ಕಗಳು ಮತ್ತು ಅವರ ನೈತಿಕತೆಯ ಮೂಲಕ, ಅಡಿಪಾಯವು ಪೂರ್ಣಗೊಳ್ಳುತ್ತದೆ ಮತ್ತು ನಂತರ ಜನರು ಸುಲಭವಾಗಿ ಬೈಅತ್ ಮಾಡುತ್ತಾರೆ ಎಂದು ಅವರು ಹೇಳುತ್ತಾರೆ.

ಅದೇನೇ ಇದ್ದರೂ, ಅವರು ಸ್ಪೇನ್‌ನಲ್ಲಿ ಉತ್ತಮ ಸೇವೆ ಸಲ್ಲಿಸಿದರು ಮತ್ತು ಅಲ್ಲಿಯೂ ಜಮಾಅತ್ ಅನ್ನು ಸ್ಥಾಪಿಸಿದರು. ನಿಜವಾದ ಇಸ್ಲಾಂ ಧರ್ಮವಾದ ಅಹ್ಮದೀಯತ್‌ನ ಬೋಧನೆಗಳನ್ನು ಪ್ರಚಾರ ಮಾಡಲು ಅವರು ನಿಜವಾದ ಉತ್ಸಾಹವನ್ನು ಹೊಂದಿದ್ದರು. ಇದರ ಜೊತೆಯಲ್ಲಿ, ಅವರು ತುಂಬಾ ವಿನಮ್ರರಾಗಿದ್ದರು ಎಂಬುದು ಸಂಪೂರ್ಣವಾಗಿ ನಿಜ. ನಾನು ಅವರನ್ನು ಸ್ಪೇನ್‌ಗೆ ಹೋಗಬೇಕೆಂದು ಕೇಳಿದಾಗ, ಅವರು ಆ ಸಮಯದಲ್ಲಿ ಅವರು ಅಸ್ವಸ್ಥರಾಗಿದ್ದರೂ ಸಹ ಯಾವುದೇ ಕ್ಷಮೆಯನ್ನು ಪ್ರಸ್ತುತಪಡಿಸದೆ ಹೋದರು.

ಸರ್ವಶಕ್ತನಾದ ಅಲ್ಲಾಹನು ಜಮಾಅತ್‌ಗೆ ನಿಸ್ವಾರ್ಥ ಸೇವೆಗಳನ್ನು ಸಲ್ಲಿಸುವ ಮತ್ತು ತಮ್ಮ ಕಾರ್ಯಗಳನ್ನು ಪೂರೈಸುವ ಇಂತಹ ನಿಷ್ಠಾವಂತ ಮತ್ತು ಶ್ರದ್ಧಾವಂತ ಮಿಷನರಿಗಳನ್ನು ನೀಡಲಿ. ಅಲ್ಲಾಹನು [ಸ್ವರ್ಗದಲ್ಲಿ] ಅವರ ಸ್ಥಾನವನ್ನು ಹೆಚ್ಚಿಸಲಿ.

ಎರಡನೇ ನಮಾಝ್ ಜನಾಝ ಮಾನ್ಯ ಇಕ್ಬಾಲ್ ಅಹ್ಮದ್ ಮುನೀರ್ ಸಾಹಿಬ್ ಅವರದ್ದಾಗಿದೆ. ಅವರು ಪಾಕಿಸ್ತಾನದ ಮಿಷನರಿ ಮತ್ತು ಚೌಧರಿ ಮುನೀರ್ ಅಹ್ಮದ್ ಸಾಹಿಬ್ ಅವರ ಪುತ್ರರಾಗಿದ್ದಾರೆ. ಅವರು ಇತ್ತೀಚೆಗೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. 1895 ರಲ್ಲಿ ಅವರ ತಂದೆಯ ಅಜ್ಜ ಚೌಧರಿ ಗುಲಾಮ್ ಹೈದರ್ ಸಾಹಿಬ್ ಅವರ ಮೂಲಕ ಅಹ್ಮದೀಯತ್ ಅವರನ್ನು ಅವರ ಕುಟುಂಬಕ್ಕೆ ಪರಿಚಯಿಸಲಾಯಿತು. ಮೃತರು 1983 ರಲ್ಲಿ ಜಾಮಿಯಾ ಅಹ್ಮದಿಯಾದಲ್ಲಿ ತಮ್ಮ ಅಧ್ಯಯನವನ್ನು ಪೂರ್ಣಗೊಳಿಸಿದರು ಮತ್ತು ನಂತರ ಅವರು ಇಸ್ಲಾ-ವ-ಇರ್ಷಾದ್ ಮರ್ಕಝಿಯಾ ಅವರ ಅಡಿಯಲ್ಲಿ ಸೇವೆ ಸಲ್ಲಿಸಿದರು. ನಂತರ 2001 ರಿಂದ 2008 ರವರೆಗೆ ಅವರು ಸೆರಾ ಲಿಯೋನ್‌ನಲ್ಲಿ ಸೇವೆ ಸಲ್ಲಿಸಿದರು ಮತ್ತು ನಂತರ ಪಾಕಿಸ್ತಾನಕ್ಕೆ ಮರಳಿದರು. ನಂತರ ಅವರು ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದರು. ಅವರು ಹೃದ್ರೋಗಿಯಾಗಿದ್ದರು, ಆದರೆ ಇದರ ಹೊರತಾಗಿಯೂ ಅವರು ಶ್ರದ್ಧೆಯಿಂದ ಕೆಲಸ ಮಾಡಿದರು. ಅಲ್ಲಾಹನ ಕೃಪೆಯಿಂದ ಅವರು ಮೂಸಿಯಾಗಿದ್ದರು. ಅವರು ಅತ್ಯಂತ ಶ್ರದ್ಧೆ ಮತ್ತು ಶ್ರಮದಿಂದ ತಮ್ಮ ಸೇವೆಯನ್ನು ಸಲ್ಲಿಸಿದರು. ಅವರು ಜನರೊಂದಿಗೆ ಉತ್ತಮ ಸಂಬಂಧವನ್ನು ಹೊಂದಿದ್ದರು ಮತ್ತು ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ಮೃತರು ಪತ್ನಿ ಹಾಗೂ ಮೂವರು ಪುತ್ರರನ್ನು ಅಗಲಿದ್ದಾರೆ.

ಮಿಷನರಿಯಾಗಿರುವ ಅಬ್ದುಲ್ ವಕೀಲ್ ಸಾಹಿಬ್ ಬರೆಯುತ್ತಾರೆ: “ಅವರು ಎಲ್ಲರಿಂದ ಪ್ರೀತಿಪಾತ್ರರಾಗಿದ್ದರು ಮತ್ತು ಖಿಲಾಫತ್‌ನೊಂದಿಗೆ ಆಳವಾದ ಬಾಂಧವ್ಯವನ್ನು ಹೊಂದಿದ್ದರು. ಅವರು ವಿಸ್ಮಯಕಾರಿ ವ್ಯಕ್ತಿತ್ವದ ಪ್ರೀತಿಯ ವ್ಯಕ್ತಿಯಾಗಿದ್ದರು. ಅವರು ತುಂಬಾ ಕರುಣಾಮಯಿಯಾಗಿದ್ದರು. ಅವರೊಂದಿಗಿನ ಸಂಕ್ಷಿಪ್ತ ಭೇಟಿಯ ನಂತರ ಅವರು ತುಂಬಾ ವಿನಮ್ರ ವ್ಯಕ್ತಿ ಎಂದು ಒಬ್ಬರು ತಿಳಿಯಬಹುದು.

ಅವರ ಜೊತೆ ಕೆಲಸ ಮಾಡಿದ ಸೈಯದ್ ಮುನೀರ್ ಅಹಮದ್ ಸಾಹಿಬ್ ನಾಯಿಬ್ ಅಮೀರ್ ಕರಾಚಿ ಅವರು ತುಂಬಾ ಕಠಿಣ ಪರಿಶ್ರಮಿ ಮತ್ತು ಪ್ರಾಮಾಣಿಕ ವ್ಯಕ್ತಿಯಾಗಿದ್ದರು ಎಂದು ಹೇಳುತ್ತಾರೆ. ಯಾವುದೇ ಕೆಲಸ ಕೊಟ್ಟರೂ ಮೊದಲ ಆದ್ಯತೆಯಲ್ಲಿ ತಕ್ಷಣವೇ ಮಾಡುತ್ತಿದ್ದರು. ನಿತ್ಯ ಕಚೇರಿಗೆ ಬಂದು ಸಲಹೆ ನೀಡುತ್ತಿದ್ದರು. ಅವರಿಂದಲೂ ನನಗೆ ಪ್ರೋತ್ಸಾಹ ಸಿಕ್ಕಿದೆ ಎನ್ನುತ್ತಾರೆ. ಅವರು ಹೃದಯದಿಂದ ಬಹಳ ಪರಿಶುದ್ಧರಾಗಿದ್ದರು. ಅವರು ವೃತ್ತದ ಜನರೊಂದಿಗೆ ವೈಯಕ್ತಿಕ ಸಂಬಂಧವನ್ನು ಹೊಂದಿದ್ದರು, ಈ ಕಾರಣದಿಂದಾಗಿ ಅವರು ಚಂದಾ ಪಾವತಿಸುವ ಬಗ್ಗೆ ಇತರರಿಗೆ ನೆನಪಿಸಲು ಸೂಚಿಸಿದರು ಮತ್ತು ಇದು ಇತರರ ಮೇಲೆ ಹೆಚ್ಚಿನ ಪ್ರಭಾವ ಬೀರಿತು. ಸರ್ವಶಕ್ತನಾದ ಅಲ್ಲಾಹನು ನಿಧನ ಹೊಂದಿದವರಿಗೆ ಕ್ಷಮೆ ಮತ್ತು ಕರುಣೆಯನ್ನು ನೀಡಲಿ ಮತ್ತು ಅವರ ಸ್ಥಾನವನ್ನು [ಸ್ವರ್ಗದಲ್ಲಿ] ಉನ್ನತೀಕರಿಸಲಿ.

ಮೂರನೇ ಪ್ರಸ್ತಾಪ ಖಾದಿಯಾನಿನ ದರ್ವೇಶಾದ ಮಿಯಾ ಅಬ್ದುಲ್ ಅಝೀಮ್‌ರ ಪತ್ನಿಯಾದ ಸಯ್ಯದ ನುಸ್ರತ್ ಜಹಾನ್ ಬೇಗಂ ಸಾಹಿಬರದ್ದಾಗಿದೆ. ಇವರು ದರ್ವೇಶಿ ಕಾಲದಲ್ಲಿ ಒಡೀಶದಿಂದ ವಿವಾಹಗೊಂಡು ಬಂದ ಮೊದಲ ಮಹಿಳೆಯಾಗಿದ್ದರು. ದಿವಂಗತರು ತಮ್ಮ ಪತಿಯೊಂದಿಗೆ ದರ್ವೇಶಿ ಕಾಲವನ್ನು ಸಹನೆ ಮತ್ತು ಕೃತಜ್ಞತೆಯೊಂದಿಗೆ ಸಾಗಿಸಿದರು. ಉಪವಾಸ ಮತ್ತು ನಮಾಝನ್ನು ಅತ್ಯಂತ ಕಟ್ಟುನಿಟ್ಟಾಗಿ ಪಾಲಿಸುವ, ದುಆ ಮಾಡುವ ನಿಷ್ಠಾವಂತೆ ಮಹಿಳೆಯಾಗಿದ್ದರು. ನಿಯತವಾಗಿ ತಿಲಾವತ್ ಮಾಡುವ ಮತ್ತು ಪವಿತ್ರ ಖುರ್‌ಆನ್ ಇತರರಿಗೆ ಕಲಿಸುವ ಸ್ತ್ರೀಯಾಗಿದ್ದರು. ಅನೇಕ ಮಕ್ಕಳಿಗೆ ಮತ್ತು ಮಹಿಳೆಯರಿಗೆ ಪವಿತ್ರ ಖುರ್‌ಆನ್ ಓದಲು ಕಲಿಸಿದ್ದರು. ಜನಸೇವೆಯ ಉತ್ಸಾಹ ಅವರಿಗೆ ಬಹಳವಿತ್ತು. ಖಾದಿಯಾನಿನಲ್ಲಿ ಮಹಿಳೆಯರ ಕಫನ್ ಮಾಡುವ ಸಂದರ್ಭದಲ್ಲಿ ಬಹಳ ಸೇವೆ ಮಾಡುತ್ತಿದ್ದರು. ಖ಼ಲೀಫತುಲ್ ಮಸೀಹ್‌ರೊಂದಿಗೆ ವಿಶೇಷವಾದ ಸಂಬಂಧವಿತ್ತು. ನಾಲ್ವರು ಪುತ್ರರು ಮತ್ತು ಒಬ್ಬಳು ಮಗಳನ್ನು ಅವರು ಅಗಲಿರುವರು. ಖುರ್ಶಿದ್ ಅನ್ವರ್ ಸಾಹಿಬ್‌ರ ಎರಡನೇ ತಾಯಿಯಾಗಿದ್ದರು. ಅಹ್ಮದೀ ಚರಿತ್ರೆಗಾರರಾದ ದೋಸ್ತ್ ಮುಹಮ್ಮದ್ ಶಾಹಿದ್ ಸಾಹಿಬ್‌ರ ಚಿಕ್ಕಮ್ಮ ಆಗಿದ್ದರು.

ಅಲ್ಲಾಹನು ಅವರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಅವರ ಪದವಿಗಳನ್ನು ಉನ್ನತಗೊಳಿಸಲಿ. ಜುಮಾ ನಮಾಝಿನ ನಂತರ ನಾನು ಅವರ ಜನಾಝ ಗ಼ಾಯಿಬ್ ನಿರ್ವಹಿಸುವೆನು.

**(ಅಲ್-ಫಜಲ್ ಇಂಟರ್‌ನ್ಯಾಶನಲ್ ಡೈಲಿ, ಏಪ್ರಿಲ್ 21, 2023, ಪುಟ 2-7)**

...*...*...*...

**<u>ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್</u>**

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್(ಸ) ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ನಂಪುಟ-1 ರೂಹಾನಿ ಖ಼ಝಾಇನ್ ಸಂಪುಟ 17, ಪುಟ 345)***

*(ಪುಟ ಸಂಖ್ಯೆ 01ರ ಉಳಿದ ಭಾಗ)*
ಯಾರು ಹೀಗೆ ಮಾಡುವುದಿಲ್ಲವೊ ಅದರ ಬದಲು ಅತ್ಯಧಿಕವಾಗಿ ಕೋಪಗೊಂಡು ಉತ್ಸುಕನಾಗುತ್ತಾನೋ ಅವನು ಇತರರನ್ನು ಎಂದಿಗೂ ಅರ್ಥಮಾಡಿಸಲು ಸಾಧ್ಯವಿಲ್ಲ."

ನುಬುವ್ವತ್‌ನ ಅರ್ಥದ ಪ್ರಕಾರ ದೈವಿಕ ಸಹಾಯದಿಂದ ಜನರನ್ನು ಧರ್ಮದ ಕಡೆಗೆ ಕರೆಯಿರಿ ಎಂದರ್ಥ. ಪವಿತ್ರ ಖುರ್‌ಆನ್ ನೀಡಿದ ಪುರಾವೆಗಳನ್ನು ನೀಡಿರಿ, ನಿಮ್ಮ ಕಡೆಯಿಂದ ರಹಸ್ಯವಾಗಿ ಏನನ್ನು ಪ್ರಸ್ತುತಪಡಿಸಬೇಡಿ. ಆಹ್! ಈ ಉಪಾಯವನ್ನು ಮುಸ್ಲಿಮರು ಅರ್ಥ ಮಾಡಿಕೊಳ್ಳುತ್ತಿದ್ದರೆ ಅವರು ಯಹೂದಿಯರನ್ನು ಮತ್ತು ಕ್ರಿಶ್ಚಿಯನ್ ಧರ್ಮವನ್ನು ಇಲ್ಲವಾಗಿಸುತ್ತಿದ್ದರು. ನಮ್ಮ ಆಯುಧವು ಪವಿತ್ರ ಖುರ್‌ಆನ್ ಆಗಿದೆ, ಅದರ ಬಗ್ಗೆ ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ: **ವಜಾಹಿದ್‌ಹುಮ್ ಬಿಹೀ** (ಫುರ್ಖಾನ್: ರುಕು–5) ಈ ಖುರ್‌ಆನ್ ಎಂಬ ಖಡ್ಗವನ್ನು ತೆಗೆದುಕೊಂಡು ಜಿಹಾದ್‌ಗಾಗಿ ಪ್ರಪಂಚದಿಂದ ಹೊರಡಿರಿ. ವಿಷಾದದ ಸಂಗತಿ ಎಂದರೆ, ಇಂದು ಜಗತ್ತಿನಲ್ಲಿರುವ ಎಲ್ಲ ವಸ್ತುಗಳು ಮುಸಲ್ಮಾನರ ಕೈಯಲ್ಲಿದೆ ಆದರೆ ಈ ಖಡ್ಗ (ಪವಿತ್ರ ಖುರ್‌ಆನ್) ಮಾತ್ರ ಅವರ ಬಳಿ ಇಲ್ಲ. ಅದನ್ನು ತೆಗೆದು ಹೊರಬರಲು ಆದೇಶಿಸಲಾಗಿದೆ.

**ಮಾಯಮ್‌ನಲು ಮುಮಿನಲ್ ಜಹ್ಲಿ** ನ ಪ್ರಕಾರ ಈ ಆಯತ್‌ನ ಅರ್ಥ ಏನಾಗುವುದು ಎಂದರೆ ನೀವು ಇನ್ನೊಬ್ಬರಿಗೆ ಅರ್ಥವಾಗುವಂತೆ ಮಾತನಾಡಬೇಕು ಮತ್ತು ಅವನ ತಪ್ಪು ತಿಳುವಳಿಕೆಯನ್ನು ಅದರಿಂದ ದೂರಮಾಡಬೇಕು ಎಂದಾಗಿದೆ. ಅಂದರೆ, ಅದು ಅಜ್ಞಾನವನ್ನು ನಾಶಪಡಿಸುವ ಮತ್ತು ಎದುರಾಳಿಯ ತಿಳುವಳಿಕೆಗೆ ಅನುಗುಣವಾಗಿರಬೇಕು. ಆದ್ದರಿಂದ ಒಂದು ಹದೀಸ್‌ನಲ್ಲಿ ಹೀಗೆ ಉಲ್ಲೇಖವಿದೆ: **ಅಮರನಾ ರಸೂಲುಲ್ಲಾಹಿ ಸಲ್ಲಲ್ಲಾಹು ಅಲೈಹಿವಸಲ್ಲಮ ಅನ್ ನುಕಲ್ಲಿಮನ್ನಾಸ ಅಲಾ ಖದ್ರಿ ಉಖೂಲಿಹಿಮ್** ಅಂದರೆ ನಮಗೆ ಪ್ರವಾದಿ(ಸ) ಅವರು ಜನರ ತಿಳುವಳಿಕೆಯ ಆಧಾರದ ಮೇಲೆ ಮತ್ತು ಅವರ ಅನುಗುಣವಾಗಿ ಜನರೊಂದಿಗೆ ಮಾತನಾಡಲು ನಮಗೆ ಆಜ್ಞಾಪಿಸಿದ್ದರು. ಕೆಲವರು ಉಪನ್ಯಾಸಗಳನ್ನು ನೀಡುವಾಗ, ದೊಡ್ಡ ದೊಡ್ಡ ಪದಗಳನ್ನು ಮತ್ತು ಪಾರಿಭಾಷಿಕ ಪದಗಳನ್ನು ಬಳಸಿ ಬೆದರಿಸಲು ಬಯಸುತ್ತಾರೆ. ಆದರೆ ಈ ಭಾಷಣಗಳು ಅಜ್ಞಾನಿಗಳನ್ನು ಹೆದರಿಸುತ್ತವೆ, ಆದರೆ ಅವರ ಮಾತಿನಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ.

ಸತ್ಯ ಮಾತನ್ನಾಡುವುದನ್ನು ಸಹ ಹಿಕ್ಮತ್ (ಬುದ್ಧಿವಂತಿಕೆ) ಎಂದು ಕರೆಯುತ್ತಾರೆ. ಈ ಅರ್ಥದ ಪ್ರಕಾರ, ಆಯತ್‌ನ ಅರ್ಥವು ಎಂತಹ ಮಾತನ್ನಾಡಬೇಕು ಎಂದರೆ ಅದು ಸತ್ಯ ಮತ್ತು ಘಟನೆಗಳ ಅನುಗುಣವಾಗಿರಬೇಕು. ಕೆಲವರು ತಪ್ಪು ವಿಷಯಗಳನ್ನು ಸಹ ವಿವರಿಸುತ್ತಾರೆ. ಈ ವಿಧಾನವು ತಪ್ಪು ಎಂದು ಹೇಳಿದರು. ಶತ್ರುಗಳ ವಿರುದ್ಧವೂ ಸತ್ಯವನ್ನು ಮಾತನಾಡಿ. ಅವನು ಹೇಳಿದಂತೆ ಇತರರಿಗೆ ಮಾರ್ಗದರ್ಶನ ನೀಡುವಾಗ ನೀವು ದಾರಿ ತಪ್ಪಬೇಡಿ. **ಲಾ ಯರುಝುರ್ರುಕುಮ್ ಮನ್ ಝಲ್ಲ ಇಝುಹ್ತದೈತುಮ್** (ಮಾಇದಃ: ರುಕು–14) ನೀವು ಮಾರ್ಗದರ್ಶನಕ್ಕೆ ಅಂಟಿಕೊಂಡರೆ, ಇತರರು ದಾರಿ ತಪ್ಪುತ್ತಾರೆ ಎಂದು ಚಿಂತಿಸಬೇಡಿ. ಏಕೆಂದರೆ, ಅದರ ಮೂಲಕ ನಾನು ಇತರರಿಗೆ ಮಾರ್ಗದರ್ಶನ ನೀಡುತ್ತೇನೆ ಎಂಬ ಭಾವನೆಯಿಂದ ಪಾಪವಾದ ಯಾವುದನ್ನೂ ಮಾಡಬೇಡಿ, ನಿಮ್ಮ ಮಾರ್ಗದರ್ಶನ ಮತ್ತು ಇತರರ ಮಾರ್ಗದರ್ಶನ ಯಾವಾಗ ಘರ್ಷಣೆಯಾಗುತ್ತದೆಯೋ, ಆಗ ನೀವು ನಿಮ್ಮ ಸ್ವಂತ ಮಾರ್ಗದರ್ಶನದ ಬಗ್ಗೆ ಚಿಂತಿಸಬೇಕು ಮತ್ತು ಇತರರ ಮಾರ್ಗದರ್ಶನವನ್ನು ಅಲ್ಲಾಹನಿಗೆ ಬಿಡಬೇಕು. (ಮೂಮಿನ್) ನಂಬಿಕೆಯುಳ್ಳವನು ಅವಿಶ್ವಾಸಿಯಾಗುವುದು ಮತ್ತು ಅವಿಶ್ವಾಸಿಯು ಮೂಮಿನ್ ಆಗುವುದನ್ನು ಅಲ್ಲಾಹನು ಇಷ್ಟಪಡುವುದಿಲ್ಲ. ಅವನು ಇತರರಿಗೆ ಮಾರ್ಗದರ್ಶನ ನೀಡಲು ಬಯಸುತ್ತಾನೆ.

ಹಿಕ್ಮತ್ (ಬುದ್ಧಿವಂತಿಕೆ) ಸಂದರ್ಭೋಚಿತವಾಗಿ ಮಾತನಾಡುವುದಕ್ಕೂ ಕರೆಯುತ್ತಾರೆ. ಈ ಅರ್ಥಗಳ ಪ್ರಕಾರ, ಆಯತ್‌ನ ಅರ್ಥವು ತಬ್ಲೀಗ್‌ನ ಸಂದರ್ಭದಲ್ಲಿ ಸಂದರ್ಭದ ಪ್ರಕಾರ ಮಾತನಾಡಬೇಕು. ಕೆಲವು ವಾದಗಳಿಂದ ಶತ್ರುಗಳು ಪ್ರಚೋದಿತರಾಗುತ್ತಾರೆ ಎಂಬ ಭಯವಿದ್ದರೆ ಮತ್ತು ಅವರು ನಿಮ್ಮ ಮಾತನ್ನು ಈ ರೀತಿ ಕೇಳದಿರುವ ಅಪಾಯವಿದ್ದರೆ, ನಂತರ ಅವನನ್ನು ಅನಗತ್ಯವಾಗಿ ಪ್ರಚೋದಿಸುವುದು ಸೂಕ್ತವಲ್ಲ. ಅವನು ತಣ್ಣನೆಯ ಹೃದಯದಿಂದ ಕೇಳಬಹುದಾದ ಇತರ ವಾದಗಳನ್ನು ನೀವು ಅವನ ಮುಂದೆ ವಿವರಿಸಬೇಕು. ನೀವು ಇಚ್ಛೆಯಂತೆ ಅವನನ್ನು ಕೆರಳಿಸಿದರೆ, ಅದು ಒಳ್ಳೆಯದನ್ನು ಮಾಡುವುದಿಲ್ಲ.

ಅಲ್ಲಾಹನು ಉಪದೇಶದ ಎಲ್ಲಾ ಅಂಶಗಳನ್ನು ಈ ಸಣ್ಣ ಪದಗಳಲ್ಲಿ ವಿವರಿಸಿದ್ದಾನೆ. ಅದನ್ನು ಅನುಸರಿಸುವವನು ತನ್ನ ಗುರಿಯಲ್ಲಿ ಎಂದಿಗೂ ವಿಫಲನಾಗುವುದಿಲ್ಲ.

**ಅಲ್ ಮೌಊಝುತುಲ್ ಹಸನ–** ಮೌಇಝು ಹಸನ ಉತ್ತಮ ಧರ್ಮೋಪದೇಶದ ಅರ್ಥವು ಈಗಾಗಲೇ ಹಾದುಹೋಗಿದೆ. (ಅಂದರೆ, ಹೃದಯಗಳನ್ನು ಮೃದುಗೊಳಿಸುವ ಮತ್ತು ಅದರ ಮೇಲೆ ಆಳವಾದ ಪರಿಣಾಮ ಬೀರುವ ಪದಗಳು) ಈ ಸಲಹೆಯೊಂದಿಗೆ ಇತ್ತ ಕಡೆ ಮುಸ್ಲಿಮರಿಗೂ ಒಣ ವಾದಗಳೊಂದಿಗೆ ವರ್ತಿಸಬಾರದು ಎಂದು ಗಮನ ಸೆಳೆದನು. ಅದಕ್ಕಿಂತ ಹೆಚ್ಚಾಗಿ ಭಾವನೆಗಳನ್ನು ಹುಟ್ಟುಹಾಕುವ ಮತ್ತು ಬುದ್ಧಿವಂತಿಕೆಯಿಂದ ಉಪದೇಶವನ್ನು ಸೇರಿಸಿರಿ, ಹಸನ ಪದವನ್ನು ಇರಿಸಿ, ಅಂದಿನ ಅಜ್ಞಾನ ಕಾಲದ ವಿದ್ವಾಂಸರು ವಿನಾಕಾರಣ ಸಜ್ಜನರ ವಿರುದ್ಧ ಜನರನ್ನು ಎತ್ತಿಕಟ್ಟುತ್ತಿದ್ದಂತೆ ಸುಳ್ಳು ಗೌರವಗಳನ್ನು ಎತ್ತಬೇಡಿ ಎಂದು ಹೇಳಿದನು.

**ಜಾದಿಲ್ಹುಮ್ ಬಿಲ್ಲತಿ ಹಿಯ ಅಹ್ಸನು** ಎಂದು ಹೇಳಿ ಅವರೊಡನೆ ತಕರಾರು ಮಾಡುವಾಗ ವಿವಿಧ ವಾದಗಳಲ್ಲಿ ಅತ್ಯುನ್ನತ ಮತ್ತು ಪ್ರಬಲವಾದ ವಾದವನ್ನು ಕೇಂದ್ರವಾಗಿರಿಸಿ ಉಳಿದ ವಾದಗಳು ಅದರ ಆಧಾರದ ಮೇಲೆ ನೆಲೆಗೊಂಡಿವೆ ಎಂಬುದನ್ನು ನೆನಪಿನಲ್ಲಿಡಲು ಹೇಳಲಾಗಿದೆ. ಏಕೆಂದರೆ ಪೋಷಕವಾದವು ಮೂಲ ವಾದವನ್ನು ದುರ್ಬಲಗೊಳಿಸುವುದಿಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಕೇಂದ್ರಬಿಂದುವು ದುರ್ಬಲವಾಗಿದ್ದರೆ, ಬಲವಾದ ಬೆಂಬಲ ವಾದಗಳು ಸಹ ಹೆಚ್ಚಿನ ಪ್ರಯೋಜನ ನೀಡುವುದಿಲ್ಲ. **ಇನ್ನ ರಬ್ಬಕ ಹುವ ಅಅ್‌ಲಮು ಬಿಮನ್ ಝಲ್ಲ ಅನ್ ಸಬೀಲಿಹಿ ವಹುವ ಅಅ್‌ಲಮು ಬಿಲ್ ಮುಹ್ತದೀನ್** ನಲ್ಲಿ ನೀವು ಚೆನ್ನಾಗಿ ತಬ್ಲೀಗ್ ಮಾಡುತ್ತಿರಬೇಕು (ಬೋಧಿಸಬೇಕು) ಆದರೆ ಜನರು ನಂಬದಿದ್ದರೆ, ಅದಕ್ಕೆ ಪರಿಣಾಮವಾಗಿ ನಮಗೆ ಬೋಧಿಸುವುದು ಹೇಗೆಂದು ತಿಳಿದಿಲ್ಲ ಎಂದು ನಿರಾಶೆಗೊಳ್ಳಬೇಡಿ ಏಕೆಂದರೆ ನಿಮ್ಮ ಉಪದೇಶದಲ್ಲಿ ಯಾವುದೇ ದೋಷವಿಲ್ಲ, ಆದರೆ ಎದುರಾಳಿಯ ಮನಸ್ಸಿನಲ್ಲಿ ಅವನ ಪಾಪಗಳ ತುಕ್ಕು ಹಿಡಿದಿದೆ, ಸರ್ವಶಕ್ತನಾದ ಅಲ್ಲಾಹನು ಅವನಿಗೆ ಮಾರ್ಗದರ್ಶನದ ಬಾಗಿಲನ್ನು ತೆರೆಯುವುದಿಲ್ಲ. **(ತಫ್ಸೀರ್ ಕಬೀರ್, ಸಂಪುಟ–4, ಪುಟ–273, ಪ್ರಕಟಿತ ಖಾದಿಯಾನ್ 2010)**

*(ಪುಟ ಸಂಖ್ಯೆ 02ರ ಉಳಿದ ಭಾಗ)*
ಕುಡಿಯುವ, ಮಲಗುವ ಮತ್ತು ಲೈಂಗಿಕತೆಯ ಕೆಲವು ವಿಷಯಗಳಲ್ಲಿ ಅಡಗಿದೆ. ಸೂಫಿಸಂನ ಆತ್ಮವು ಕಡಿಮೆ ಮಾತನಾಡುವುದು, ಕಡಿಮೆ ತಿನ್ನುವುದು ಮತ್ತು ಕಡಿಮೆ ನಿದ್ರೆ ಮಾಡುವುದು ಎಂದು ಕೆಲವು ಸೂಫಿಗಳು ಹೇಳಿದ್ದಾರೆ ಮತ್ತು ರಮಝಾನ್ ಈ ಸೂಫಿಸಂನ ಸಂಪೂರ್ಣ ಆತ್ಮದ ಸಾರವನ್ನು ಒಳಗೊಂಡಿದೆ. ಕಡಿಮೆ ನಿದ್ರೆ ಮಾಡುವುದು ಇದರಲ್ಲಿ ಒಳಗೊಂಡಿದೆ ಅದು ಹೇಗೆ ಎಂದರೆ ರಾತ್ರಿ ಹೊತ್ತು ತಹಜ್ಜುದ್ ನಮಾಝ್ ನಿರ್ವಹಿಸುದಕ್ಕೆ ಏಳುವುದು. ದಿನವಿಡೀ ಹಸಿವಿನಿಂದ ಇರಬೇಕಾದ ಕಾರಣ ಕಡಿಮೆ ತಿನ್ನುವುದು ಸ್ಪಷ್ಟವಾಗಿದೆ. ಮತ್ತು ಲೈಂಗಿಕತೆಯ ಕೊರತೆಯು ಸ್ಪಷ್ಟವಾಗಿದೆ. ನಂತರ ರಮಝಾನ್‌ನಲ್ಲಿ ಕಡಿಮೆ ಮಾತು ಬರುತ್ತದೆ ಎಂದು ಸಹ ಸ್ಪಷ್ಟವಾಗಿದೆ. ಆದ್ದರಿಂದ ಪ್ರವಾದಿ(ಸ) ಒಮ್ಮೆ ಉಪವಾಸ ಎಂದರೆ ತಿನ್ನುವುದು ಮತ್ತು ಕುಡಿಯುವುದರಿಂದ ದೂರಿರುವುದಲ್ಲ, ಬದಲಿಗೆ ಉಪವಾಸ ಎಂದರೆ ನೀವು ಮೌಢ್ಯವನ್ನು ಹೇಳಬಾರದು. ಆದುದರಿಂದ ಉಪವಾಸಿಗನು ಮೌಢ್ಯಗಳನ್ನು ತಪ್ಪಿಸುವುದು, ಜಗಳಗಳಿಂದ ತಪ್ಪಿಸಿ ಕೊಳ್ಳುವುದು ಮತ್ತು ಅಂತಹ ಮೌಢ್ಯಗಳಿಂದ ದೂರವಿರುವುದು ಅವಶ್ಯಕವಾಗಿರುತ್ತದೆ. ಈ ರೀತಿ ಕಡಿಮೆ ಮಾತನಾಡುವುದು ರಮಝಾನ್‌ನಲ್ಲಿ ಬಂದಿದೆ. ಕಡಿಮೆ ತಿನ್ನುವುದು, ಕಡಿಮೆ ಮಾತನಾಡುವುದು, ಕಡಿಮೆ ನಿದ್ದೆ ಮಾಡುವುದು ಮತ್ತು ಕಡಿಮೆ ಸಂಭೋಗ ಮಾಡುವುದು ಈ ನಾಲ್ಕು ಮಾತುಗಳು ರಮಝಾನ್‌ನಲ್ಲಿ ಒಟ್ಟಿಗೆ ಬಂದಂತೆ ಇದೆ. ಮತ್ತು ಈ ನಾಲ್ಕು ವಿಷಯಗಳು ಬಹಳ ಮುಖ್ಯವಾಗಿವೆ ಮತ್ತು ಮಾನವ ಜೀವನವು ಅವುಗಳಿಗೆ ನಿಕಟ ಸಂಬಂಧ ಹೊಂದಿದೆ, ಅವನು ಕಷ್ಟಗಳನ್ನು ಜಯಿಸಲು ಮತ್ತು ಯಶಸ್ಸನ್ನು ಸಾಧಿಸಲು ನಿರ್ವಹಿಸುತ್ತಾನೆ. (ತಫ್ಸೀರ್ ಕಬೀರ್, ಸಂಪುಟ–2, ಪುಟ 376, ಖಾದಿಯಾನ್, 2010)

ಸಯ್ಯಿದ್ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಖಲೀಫರ ಮಾತುಗಳನ್ನು ನಮ್ಮ ಹೃದಯ ಮತ್ತು ಆತ್ಮದಿಂದ ಅನುಸರಿಸುವ ಮತ್ತು ಅವುಗಳ ಪ್ರಕಾರ ನಮ್ಮ ಜೀವನವನ್ನು ನಡೆಸುವ ಸಾಮರ್ಥ್ಯವನ್ನು ಅಲ್ಲಾಹನು ನಮಗೆ ನೀಡಲಿ. ಆಮೀನ್.

**(ಮನ್ಸೂರ್ ಅಹ್ಮದ್ ಮಸ್ರೂರ್)**

**ಸೂಚನೆ::** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ ಜುಮುಅ**ವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ

**ಆಡಂಬರ ಮತ್ತು ತೋರ್ಪಡಿಕೆಗೋಸ್ಕರ ಹಕ್ಕ್ ಮಹರನ್ನು ನಿಶ್ಚಯಿಸುವುದು ತಪ್ಪು ಸಂಪ್ರದಾಯವಾಗಿರುತ್ತದೆ.**

ಹಝ್ರತ್ ಮಸೀಹ್ ಮೌಊದ್(ಅ) ನುಡಿಯುತ್ತಾರೆ:

ವಧು ಹಾಗೂ ವರನ ಕಡೆಯವರು ಇಬ್ಬರು ಸೇರಿ ರಾಜಿಯಾಗಿ ಹಕ್ಕ್ ಮಹರ್ ನಿಶ್ಚಯಿಸಿ ಕೊಳ್ಳುತ್ತಾರೆ ಇದಕ್ಕೆ ಯಾವುದೇ ಆಕ್ಷೇಪವಿಲ್ಲ. ಆದರೆ ಶರೀಅತ್ತಿನಲ್ಲಿ ಹಕ್ಕ್ ಮಹರ್ ಇಷ್ಟೇ ನೀಡಬೇಕೆಂಬ ನಿಯಮ ಅಧಿಕೃತವಾಗಿ ಹದೀಸುಗಳಲ್ಲಿ ಯಾವುದೇ ಉಲ್ಲೇಖವಿಲ್ಲ. ಆದರೆ ಆ ಸಂಧರ್ಭಕನ್ನುಸಾರ ಹಕ್ಕ್ ಮಹರ್ ನಿಶ್ಚಯಿಸಿಕೊಳ್ಳಬಹುದು. ಅಂದರೆ ಪ್ರಸಕ್ತ ಸಮಯದಲ್ಲಿನ ಜನರ ಜೀವನ ಮಟ್ಟವೇ ಆಧಾರವಾಗಿರುತ್ತದೆ.

ನಮ್ಮ ಪ್ರಾಂತ್ಯದಲ್ಲಿರುವ ಒಂದು ಕೆಟ್ಟ ಸಂಪ್ರದಾಯವೆಂದರೆ ಕೇವಲ ಹೊರ ಜಗತ್ತಿನ ತೋರಿಕೆಗಾಗಿ ಹಾಗೂ ಆಡಂಬರಕ್ಕಾಗಿ ಲಕ್ಷಾಂತರ ಹಕ್ಕ್ ಮಹರ್ ಅನ್ನು ನಿಶ್ಚಿಸಿಕೊಳ್ಳುತ್ತಾರೆ. ಆದರೆ ಅವರ ಉದ್ದೇಶ ಬೇರೆಯೇ ಆಗಿರುತ್ತದೆ. ಅದೇ ರೀತಿ ವಧುವಿನ ಕಡೆಯವರು ವರನನ್ನು ತನ್ನ ಹಿಡಿತದಲ್ಲಿ ಇರಿಸಿಕೊಳ್ಳಲು ಈ ರೀತಿಯ ಹಕ್ಕ್ ಮಹರ್‌ಅನ್ನು ನಿಶ್ಚಯಿಸಿಕೊಳ್ಳುತ್ತಾರೆ. ಆದರೆ ಇದರಿಂದ ಬೇರೆ ಅನೇಕ ಸಮಸ್ಯೆಗಳು ಉದ್ಭವವಾಗುತ್ತದೆ. **(ಮಲ್‌ಫೂಝಾತ್, ಸಂಪುಟ-3, ಪುಟ-284) (ರಿಶ್ತನಾತ ವಿಭಾಗ, ನಝಾರತ್ ಇಸ್ಲಾಹ್ ವ ಇರ್ಷಾದ್, ಖಾದಿಯಾನ್)**

**ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ. ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು.**

**ನಿಮ್ಮ ಮಕ್ಕಳನ್ನು ಜಾಮಿಯ ಅಹ್ಮದೀಯಾದಲ್ಲಿ ಶಿಕ್ಷಣವನ್ನು ಪಡೆಯಲು ಅರ್ಪಿಸಿ**

ಹಝ್ರತ್ ಅಮೀರ್-ಉಲ್-ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರು ನುಡಿಯುತ್ತಾರೆ:

ಜಮಾಅತ್ತಿನ ಅಗತ್ಯಗಳು ಹೆಚ್ಚಾದಂತೆ ತಬ್ಲೀಗಿನ ಕ್ಷೇತ್ರ ಮತ್ತು ಇತರ ಸೇವಾ ಕ್ಷೇತ್ರಗಳಲ್ಲಿ ವಾಖಿಫೀನೆ ಝಿಂದಗಿಯರ ಮತ್ತು ಮುಬಲ್ಲಿಗೀನರ (ಪ್ರಚಾರಕರು) ಅಗತ್ಯವಿದೆ. ಈ ವಿಸ್ತರಣೆಯಾಗುತ್ತಿದ್ದಂತೆ ಕೆಲಸವು ಸಹ ಹೆಚ್ಚುತ್ತಿದೆ, ಅಹ್ಮದಿಯತ್‌ನ ಸಂದೇಶ ಹರಡುತ್ತಿದೆ. ಜಗತ್ತು ಕೂಡ ಅಹ್ಮದಿಯತ್ ಅನ್ನು ಸ್ವೀಕರಿಸುತ್ತಾ ಇದೆ. ಇದರೊಂದಿಗೆ, ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ......... ಜಮಾಅತ್ತಿನ ಪ್ರತಿಯೊಬ್ಬ ವ್ಯಕ್ತಿಯು ಯಾವಾಗಲೂ ತಬ್ಲೀಗ್‌ನಲ್ಲಿ ಅಥವಾ ತರಬೇತಿ ನೀಡುವುದರಲ್ಲಿ ನಿರತರಾಗಿರುಲು ಸಾಧ್ಯವಿಲ್ಲ ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು ಎಂದು ಅಲ್ಲಾಹನು ಹೇಳಿರುವನು. ಇನ್ನೊಂದು ಸ್ಥಳದಲ್ಲಿ, ಉಮ್ಮತ್ತಿನ ಪ್ರತಿಯೊಬ್ಬ ವ್ಯಕ್ತಿಗೂ ಒಳ್ಳೆಯ ಕಾರ್ಯಗಳನ್ನು ಹರಡುವ, ಕೆಟ್ಟದ್ದನ್ನು ತಡೆಯುವ ಮತ್ತು ಅಲ್ಲಾಹನ ಕಡೆಗೆ ಆಹ್ವಾನಿಸುವ ಕರ್ತವ್ಯವನ್ನು ಪೂರೈಸುವ ಜವಾಬ್ದಾರಿಯನ್ನು ವಹಿಸಲಾಗಿದೆ. ಆದರೆ ಮತ್ತೆ ಹೇಳಿರುವುದು ಏಕೆಂದರೆ ಪ್ರಪಂಚದ ವ್ಯವಸ್ಥೆಯನ್ನು ಸಹ ನಡೆಸಬೇಕಾಗಿದೆ, ಆದ್ದರಿಂದ ಅದರಲ್ಲಿ ತೊಡಗಿರುವವರು ಯಾವಾಗಲೂ ಸಮಯವನ್ನು ನೀಡಲು ಸಾಧ್ಯವಿಲ್ಲ. ಧರ್ಮೋಪದೇಶ ಮತ್ತು ತರಬೇತಿಯ ಕೆಲಸವನ್ನು ಅತ್ಯುತ್ತಮ ರೀತಿಯಲ್ಲಿ ಮಾಡುವ ಮನೋಧರ್ಮ ಎಲ್ಲರಿಗೂ ಇರುವುದಿಲ್ಲ. ಮತ್ತು ಉಮ್ಮತ್ತಿನ ಎಲ್ಲಾ ಸದಸ್ಯರು ಧರ್ಮ ಮುಬಲ್ಲಿಗ್ ಮತ್ತು ಮುರಬ್ಬಿಯವರಿಗೆ ಅಗತ್ಯವಾದ ಧರ್ಮದ ತಿಳುವಳಿಕೆಯನ್ನು ಪಡೆಯಲು ಸಾಧ್ಯವಿಲ್ಲ. ಮತ್ತು ಎಲ್ಲಾ ಜನರಿಗೆ ವಿಶೇಷ ಗಮನದಿಂದ ತರಬೇತಿಯು ಸಹ ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನ ಆದೇಶಗಳನ್ನು, ಅನುಸರಿಸಬೇಕಾದ ಆಜ್ಞೆಗಳನ್ನು ಮತ್ತು ತಡೆಯಬೇಕಾದ ನಿಷೇಧಗಳನ್ನು ಪರಿಚಯ ಮಾಡಿಕೊಳ್ಳಲು, ಮತ್ತು ಅದರ ಆಳವಾದ ಬುದ್ಧಿವಂತಿಕೆಯನ್ನು ಕಲಿಯಲು ಮತ್ತು ನಂತರ ಅದನ್ನು ಹರಡಲು. ಧರ್ಮವನ್ನು ಪೂರ್ಣ ಗಮನದಿಂದ ಕಲಿಯುವ ಒಂದು ವಿಶೇಶ ಗುಂಪು ಇರಬೇಕು. ಮಾಶಾಅಲ್ಲಾಹ್, ತಮ್ಮ ಅಭಿರುಚಿ ಮತ್ತು ಹವ್ಯಾಸಗಳಿಂದ ಲೌಕಿಕ ಶಿಕ್ಷಣದ ಜೊತೆಗೆ ಧಾರ್ಮಿಕ ಜ್ಞಾನದ ಬಗ್ಗೆ ಉತ್ತಮ ತಿಳುವಳಿಕೆಯನ್ನು ಹೊಂದಿರುವ ಅನೇಕ ಜನರು ಜಮಾಅತ್‌ನಲ್ಲಿದ್ದಾರೆ. ಆದರೆ ಕೆಲವೊಮ್ಮೆ ಅಥವ ಸಾಮಾನ್ಯವಾಗಿಯೇ ಅವರ ಇತರ ಕಾರ್ಯಗಳ ಕಾರಣದಿಂದಾಗಿ ಸಮಯವನ್ನು ನೀಡುಲು ನಿರಂತರವಾಗಿ ಸಾಧ್ಯವಾಗುವುದಿಲ್ಲ. ಅದಾಗ್ಯೂ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ಧರ್ಮದ ಕೆಲಸಕ್ಕಾಗಿ ವಾಖಿಫೀನೆ ಝಿಂದಗಿಯರ ಗುಂಪು ಇರಬೇಕು ಮತ್ತು ಇಸ್ಲಾಂ ಸಾರ್ವತ್ರಿಕ ಧರ್ಮವಾಗಿರುವುದರಿಂದ ಅದು ಪ್ರತಿಯೊಂದು ಪಂಗಡದಿಂದ, ಅಂದರೆ ಪ್ರತಿಯೊಂದು ಗುಂಪಿನಿಂದ, ಪ್ರತಿ ವರ್ಗದಿಂದ, ಪ್ರತಿಯೊಂದು ವಿಭಾಗದಿಂದ ಜನರ ಜನರ ಗುಂಪು ಇರಬೇಕು. ತದನಂತರ ಮತ್ತಷ್ಟು ವಿಸ್ತರಿಸಿದರೆ, ಪ್ರತಿಯೊಂದು ಖೌಮಿನ(ಗೋತ್ರದಿಂದ) ಜನರು ಧರ್ಮವನ್ನು ಕಲಿಯಬೇಕು ಮತ್ತು ಮುಂದೆ ಕಲಿಸಬೇಕು ಎಂದು ಹೇಳಿರುವನು. ಪ್ರತಿಯೊಂದು ಖೌಮಿನವರು ಮತ್ತು ಪ್ರತಿಯೊಂದು ವರ್ಗವು ವಿಭಿನ್ನ ಮನೋಧರ್ಮ, ಮನೋವಿಜ್ಞಾನ ಮತ್ತು ವಿಧಾನವನ್ನು ಹೊಂದಿದೆ. ಅದಕ್ಕೆ ತಕ್ಕಂತೆ ಉಪದೇಶ ಮಾಡುವ ವಿಧಾನವನ್ನು ಕೈಗೊಳ್ಳಬೇಕು. ಈ ರೀತಿಯಲ್ಲಿ, ತಬ್ಲೀಗ್ ಮತ್ತು ತರಬೇತಿಯು ಸುಲಭವಾಗುತ್ತದೆ. ಏನೇ ಇರಲಿ, ಸರ್ವಶಕ್ತನಾದ ಅಲ್ಲಾಹನು ತಬ್ಲೀಗಿಗಾಗಿ ಮತ್ತು ತರಬೇತಿಗಾಗಿ ಕಾರ್ಯವನ್ನು ನಿರ್ವಹಿಸುವ ವಿಶ್ವಾಸಿಗಳ ಗುಂಪು ಇರಬೇಕು ಮತ್ತು ನಂತರ ಪ್ರತಿಯೊಂದು ಖೌಮು ಮತ್ತು ಪ್ರತಿಯೊಂದು ವರ್ಗದ ಜನರು ಇರಬೇಕು ಇದರಿಂದ ಈ ಕಾರ್ಯವನ್ನು ಸುಗಮಗೊಳಿಸಬಹುದು ಎಂದು ನಮಗೆ ಮಾರ್ಗದರ್ಶನ ನೀಡಿರುವನು.

ಆದುದರಿಂದ ಅಹ್ಮದಿಯಾ ಜಮಾಅತ್ ಈ ತತ್ವದಡಿಯಲ್ಲಿ ಧರ್ಮಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿಡುವ ವ್ಯವಸ್ಥೆಯನ್ನು ಹೊಂದಿದೆ. ಮತ್ತು ನಾನು ಹೇಳಿದಂತೆ, ಅಲ್ಲಾಹನ ಅನುಗ್ರಹದಿಂದ ವಿವಿಧ ಖೌಮುಗಳು ಮತ್ತು ವರ್ಗಗಳ ಜನರು ಈಗ ಈ ವ್ಯವಸ್ಥೆಯ ಭಾಗವಾಗಿದ್ದಾರೆ ಮತ್ತು ಆಗುತ್ತಿದ್ದಾರೆ. ಮತ್ತು ನಾನು ಹೇಳಿದಂತೆ, ಜಮಾಅತ್ತಿನ ಅಗತ್ಯತೆಗಳು ಹೆಚ್ಚಾದಂತೆ, ಈ ಸಂಖ್ಯೆಯ ಅಗತ್ಯವು ಹೆಚ್ಚಾಗುತ್ತದೆ ಮತ್ತು ಈ ಅಗತ್ಯವು ಬೆಳೆಯುತ್ತಲೇ ಇರುತ್ತದೆ. ಇದೀಗ ಪ್ರಸ್ತುತ ಕಾಲದಲ್ಲಿ ಅಗತ್ಯವಿರುವುದು ಮಾತ್ರವಲ್ಲದೆ ಭವಿಷ್ಯದಲ್ಲಿಯು ಇದರ ಅಗತ್ಯವು ಹೆಚ್ಚಾಗಲಿದೆ.

**(ಖುತ್‌ಬ ಜುಮುಅ, ಅಕ್ಟೋಬರ್ 22, 2010)**

**(ಇಂಚಾರ್ಜ್ ನಖ್ಫೆ ನೌ ವಿಭಾಗ ಭಾರತ)**

**ವಿವಾಹ ಪ್ರಚಾರಪಡಿಸಲು ದಫ್ ಉಪಯೋಗಿಸಬಹುದು ಹೊರತು ಡೋಲು ಬಾರಿಸುತ್ತಾ ಕುಣಿಯುವುದು ನಿಷಿದ್ಧವಾಗಿದೆ**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಟ್ಟ ವಸ್ತುಗಳು ಹರಾಮ್ ಆಗಿದೆ ಮತ್ತು ಶುದ್ಧ ವಸ್ತುಗಳು ಹಲಾಲ್ ಆಗಿದೆ. ಅಲ್ಲಾಹನು ಯಾವುದೇ ಶುದ್ಧ ವಸ್ತುಗಳನ್ನು ನಿಷಿದ್ಧ (ಹರಾಮ್) ಗೊಳಿಸುವುದಿಲ್ಲ. ಬದಲು ಎಲ್ಲ ಶುದ್ಧ ವಸ್ತುಗಳು ಹಲಾಲ್ (ಧರ್ಮಬದ್ಧ) ಎನ್ನುತ್ತದೆ. ಆದರೆ ಶುದ್ಧ ವಸ್ತುಗಳೊಂದಿಗೆ ಅಶುದ್ಧ ವಸ್ತುಗಳನ್ನು ಬೆರಕೆ ಮಾಡಿದರೆ ಅದು ನಿಷಿದ್ಧವಾಗುತ್ತದೆ, ಈಗ ನೋಡಿ ವಿವಾಹವನ್ನು ಪ್ರಚಾರಪಡಿಸಲು ದಫ್ ಬಾರಿಸುವುದನ್ನು ಧರ್ಮಸಮ್ಮತವೆಂದಿದೆ. ಆದರೆ ಅದರಲ್ಲಿ ಡೋಲು ಬಾರಿಸುತ್ತಾ ಕುಣಿಯುವುದು ಇತ್ಯಾದಿ ಸೇರಿಸುವುದನ್ನು ನಿಷಿದ್ಧಗೊಳಿಸಲಾಗಿದೆ. ಆದರೆ ನಬಿ ಕರೀಂ ಸಲ್ಲಲ್ಲಾಹು ಅಲೈಹಿವಸಲ್ಲಮರ ರೀತಿಯನ್ನು ಅನುಸರಿಸಿದರೆ ಯಾವುದೂ ನಿಷಿದ್ಧವಲ್ಲ.

**(ಮಲ್‌ಫೂಝಾತ್, ಸಂಪುಟ-5, ಪುಟ-354, ಮುದ್ರಣ ಖಾದಿಯಾನ್ 2003)**

**ವಿವಾಹ ಸಂದರ್ಭದಲ್ಲಿ ನಿಷ್ಪ್ರಯೋಜಕ ಸಂಗೀತ, ಕುಣಿತ ಹಾಗೂ ಹಾಡುಗಳನ್ನು ಹಾಡಲು ಅನುಮತಿ ಇಲ್ಲ.**

ಹಝ್ರತ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್ (ಅತಬಿಅ) ಹೇಳುತ್ತಾರೆ: "ಸಂತೋಷದ ಸಂದರ್ಭಗಳಲ್ಲಿ ಅಲ್ಲಾಹನ ಅನುಗ್ರಹಗಳನ್ನು ಬೇಡುವ ವಿವಾಹವನ್ನು ಅಲ್ಲಾಹನು ಎಲ್ಲಾ ರೀತಿಯಿಂದ ಯಶಸ್ವಿಗೊಳಿಸಲಿ. ಬರುವ ಪೀಳಿಗೆ ಇಸ್ಲಾಮ್ ಧರ್ಮದ ಸೇವಕರಾಗಿರಲಿ, ಅಲ್ಲಾಹನ ವಿಧೇಯ ದಾಸರಾಗಿರಲಿ ಎನ್ನುವ ಬದಲು ಅಜಾಗೃತಗೊಂಡು ಹಾಡುಗಳನ್ನು ಹಾಡುತ್ತ ಶಿರ್ಕ್ (ಬಹು ದೇವಾರಾಧನೆ) ಮಾಡುವವರಾಗಿರುತ್ತಾರೆ. ದೂರುಗಳು ಬರುತ್ತಿರುತ್ತವೆ ಆದುದರಿಂದ ಇಂತಹ ಮನೆಯವರಿಗೆ ನಾನು ಎಚ್ಚರಿಕೆ ನೀಡುತ್ತೇನೆ, ಈ ರೀತಿಯ ನಿಷ್ಪ್ರಯೋಜಕ ಹಾಗೂ ನಿರರ್ಥಕತೆಯಿಂದ ದೂರವಿರಬೇಕು, ಹೀಗೆಯೇ ಡ್ಯಾನ್ಸ್ ಕುಣಿತಗಳಿಂದ, ವಧುವಿನ ಮನೆಯಲ್ಲಿ ನಾನಾ ರೀತಿಯ ಶೃಂಗಾರಗಳು ಅಥವಾ ವಿವಾಹ ನಂತರ ವಧು ವಿವಾಹವಾಗಿ ವರನ ಮನೆಗೆ ಹೋದಾಗ ಅಲ್ಲಿ ಕೆಲವು ಸಂದರ್ಭಗಳಲ್ಲಿ ನಿಷ್ಪ್ರಯೋಜಕ ರೀತಿಯ ಸಂಗೀತ ಅಥವಾ ಹಾಡುಗಳಿಗೆ ಕುಣಿಯುತ್ತಾರೆ, ಇದಕ್ಕೆ ಯಾವ ಕಾರಣಕ್ಕೂ ಅನುಮತಿ ನೀಡಲಾಗುವುದಿಲ್ಲ."

**(ಖುತ್‌ಬಾತೆ ಮಸ್‌ರೂರ್, ಸಂಪುಟ-3, ಪುಟ-687)**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly BADAR Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.04, Thursday, 04 May 2023, Issue No. 18

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

## ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

*(ಬದರ್ ಸಂಚಿಕೆ-17ರ ಉಳಿದ ಭಾಗ ಮುಂದುವರಿಸಲಾಗಿದೆ)*

### 30 ಸೆಪ್ಟೆಂಬರ್ ಶುಕ್ರವಾರ

ಹುಝೂರೆ ಅನ್ವರ್(ಅತಬಿಅ) ಮುಂಜಾನೆ 5:50 ಕ್ಕೆ ಮಸ್ಜಿದ್ ಫತಹ ಅಝೀಮ್ ಆಗಮಿಸಿ ಫಜರ್ ನಮಾಝ್ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿನಿಲಯಕ್ಕೆ ತೆರಳಿದರು.

ಮುಂಜಾನೆ ಹುಝೂರೆ ಅನ್ವರ್(ಅತಬಿಅ) ಕಚೇರಿಯ ಅಂಚೆಗಳನ್ನು ಪರಿಶೀಲಿಸಿದರು ಮತ್ತು ನಿರ್ದೇಶನಗಳನ್ನು ನೀಡಿದರು. ಹೀಗೆ ಹುಝೂರೆ ಅನ್ವರ್ ಕಚೇರಿ ಕಾರ್ಯಗಳಲ್ಲಿ ತಲ್ಲೀನರಾಗಿದ್ದರು.

ಇಂದು ಪವಿತ್ರ ಜುಮುಅ ದಿನವಾಗಿತ್ತು. ಇಂದಿನ ಈ ದಿವಸವು ಹಲವು ವಿಧದಲ್ಲಿ ಒಂದು ಐತಿಹಾಸಿಕ ದಿನವಾಗಿತ್ತು. ಅದು ಅಹ್ಮದಿಅತ್ ಇತಿಹಾಸದಲ್ಲಿ ಅವಿಸ್ಮರಣೀಯವಾಗಿ ಉಳಿಯುವುದು. ಇಂದು ಹುಝೂರೆ ಅನ್ವರ್ ಅವರ ಖುತುಬ ಜುಮುಅ ಅಲ್ಲದೇ ಡಾ॥ ಅಲೆಕ್ಸಂಡರ್ ಡೂಮಿಯ zion ನಗರದಲ್ಲಿ ಮಸ್ಜಿದ್ ಫತಿಹ ಅಝಿಮ್‌ನ ಉದ್ಘಾಟನೆ ಆಗಬೇಕಿತ್ತು. ಅದಲ್ಲದೆ ಇದು ಈ ನಾಡಿನಲ್ಲಿ ಖಲೀಫತುಲ್ ಮಸೀಹ್ ಒಬ್ಬರ MTA International ಮೂಲಕ ಇಡೀ ಲೋಕದಲ್ಲಿ ನೇರ ಪ್ರಸಾರವಾಗುವ ಪ್ರಥಮ ಕುತುಬ ಜುಮುಅ ಆಗಿತ್ತು.

ಇದಕ್ಕಿಂತ ಮುಂಚೆ ಅಮೇರಿಕಾದ ಪೂರ್ವಭಾಗ ವಾಷಿಂಗ್‌ಟನ್ D.C. Harrisbury ಮತ್ತು ದಕ್ಷಿಣ ಕ್ಷೇತ್ರದ ಹ್ಯೂಸ್ಟನ್ ಮತ್ತು ಪಶ್ಚಿಮ ಕ್ಷೇತ್ರದ ಲಾಸ್‌ಏಂಜಲೀಸ್ ಇಂದ ಹುಝೂರೆ ಅನ್ವರ್ ಅವರ ಜುಮುಅ ಕುತುಬಗಳು MTA ಮೇಲೆ ಪ್ರಸಾರಗೊಂಡಿದೆ.

ಡಾ॥ ಡೂಯಿ ಹೇಳಿದರು. ನಾನು ನಿರ್ಮಿಸಿದ zion ನಗರದಿಂದ ಇಸ್ಲಾಂ ಧರ್ಮದ ಧ್ವನಿಯನ್ನು ಅಡಗಿಸಿಬಿಡುವೆನು. ಇಸ್ಲಾಂ ಧರ್ಮದ ಹೆಸರು ಸಹ ಹೇಳುವವರು ಯಾರೂ ಇರಲಿಕ್ಕಿಲ್ಲ.

ಇಂದು ಅಲ್ಲಾಹನ ಅನುಗ್ರಹದಿಂದ ಹಝ್ರತ್ ಅಖ್‌ದಸ್ ಮಸೀಹ್ ಮೌಊದ್(ಅ) ರವರ ಖಲೀಫರ ನಾಲಿಗೆಯಿಂದ ದೇವವಾಣಿ (ಇಲ್‌ಹಾಮ್) ಫತಹ ಅಝೀಮ್ ನಿಂದ, ಕೇವಲ ಡೂಯಿ ನಗರದಲ್ಲಿ ಮಾತ್ರ ಇಸ್ಲಾಮಿನ ಧ್ವನಿ ಮೊಲಗುತ್ತಿಲ್ಲ. ಬದಲು ಇಲ್ಲಿಂದ ಡೂಯಿಯ ದೇಶ ಅಮೇರಿಕಾದಲ್ಲಿಯೂ ಈ ಧ್ವನಿ ಮೊಳಗುತ್ತಿದೆ. ಅದಕ್ಕಿಂತ ಹೆಚ್ಚಾಗಿ ಈ ಧ್ವನಿ ಇಲ್ಲಿಂದ ಪ್ರಪಂಚದಾದ್ಯಂತ, ಇಡೀ ಲೋಕದಲ್ಲಿ ದೇಶ ದೇಶಗಳಲ್ಲಿ, ಗ್ರಾಮ ಗ್ರಾಮಗಳಲ್ಲಿ, ಮನೆ ಮನೆಗಳಲ್ಲಿ ಆಲಿಸಲಾಗುತ್ತಿದೆ.

ಹಾಗೆ ಇಂದು ಈ ನಗರದ ಎಲ್ಲ ಭಾಗಗಳಿಂದ ಮತ್ತು ಇಲ್ಲಿಯ ಹಗಲಿರುಳಿನ ಕ್ಷಣ ಕ್ಷಣವು ಸಹ ಹಝುರತ್ ಅಖ್‌ದಸ್ ಮಸೀಹ್ ಮೌಊದ್(ಅ) ರವರ ಸತ್ಯತೆಯು ಸಾಕ್ಷ್ಯವನ್ನು ಹೇಳುತ್ತಿದೆ. **"ಸುಬ್‌ಹಾನಲ್ಲಾಹಿ ವ ಬಿಹಮ್‌ದಿಹೀ ಸುಬ್‌ಹಾಲ್ಲಾಹಿಲ್ ಅಝೀಮ್."**

ಜುಮುಅ ನವಾಝಿನಲ್ಲಿ Zion ಜವಾಅಅತ್ ಅಲ್ಲದೇ ಅಮೇರಿಕಾದ ವಿವಿಧ ಇತರ ಜಮಾಅತುಗಳಿಂದ ಜಮಾಅತ್ ಬಾಂಧವರು ಬಹು ದೂರ ದೂರದ ಪ್ರಯಾಣಗಳನ್ನು ಮಾಡಿ ಇಲ್ಲಿ ಭಾಗವಹಿಸಲು ಬಂದಿರುತ್ತಾರೆ. ಇಲ್ಲಿ ಬಂದು ಸೇರಿರುವವರಲ್ಲಿ ಬಹುದೊಡ್ಡ ಸಂಖ್ಯೆ ಒಂದು ಸಾವಿರದಿಂದ ಎರಡು ಸಾವಿರದ ಮೈಲುಗಳ ದೂರದ ಪ್ರವಾಸಮಾಡಿ ಬಂದವರಾಗಿದ್ದರು. ಜಮಾಅತ್ ನಮಾಝಿನಲ್ಲಿ ಭಾಗವಹಿಸಿದವರ ಸಂಖ್ಯೆ ಎರಡು ಸಾವಿರಕ್ಕಿಂತಲೂ ಹೆಚ್ಚಾಗಿತ್ತು.

ಅಮೇರಿಕಾ ಅಲ್ಲದೆ, ಯು.ಕೆ. ಜರ್ಮನಿ, ಸ್ವೀಡನ್, ಬ್ರಾಝೀಲ್, ಗಿಯಾನ, ಸುರೇನಾಮ್, ಪಾಕಿಸ್ತಾನ, ಕಬಾಬೀರ, ಕೆನಾಡದಿಂದ ಜಮಾಅತಿನ ಪ್ರತಿನಿಧಿಗಳು ಮತ್ತು ಇತರ ಬಾಂಧವರು ಈ ಮಸೀದಿಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲು ಬಂದಿದ್ದರು.

ಕಾರ್ಯಕ್ರಮದನ್ವಯ 1 ಗಂಟೆಗೆ ಹುಝೂರೆ ಅನ್ವರ್(ಅತಬಿಅ) ಮಸ್ಜಿದ್ ಫತಹ ಅಝೀಮ್ ಆಗಮಿಸಿದ್ದರು ಮತ್ತು ಖುತುಬ ಜುಮುಅ ನೀಡಿದರು. (ಈ ಖುತುಬದ ಸಾರಾಂಶ, 6 ಅಕ್ಟೋಬರ್ 2022 ರ ಪ್ರಕಟಗೊಂಡಿದೆ ಅಖ್ಬಾರೆ ಬದರ್ ಸಂಚಿಕೆ ಸಂಖ್ಯೆ 40 ರಲ್ಲಿ ಅದರ ಸಂಪೂರ್ಣ ಭಾಗ ಅದೇ ಸಂಚಿಕೆಯಲ್ಲಿ ಪರಿಶೀಲಿಸಬಹುದು.)

ಹುಝೂರೆ ಅನ್ವರ್(ಅತಬಿಅ) ಅವರು ಈ ಖುತುಬ ಜುಮುಅ 1:50 ಗಂಟೆಯವರೆಗೆ ಜಾರಿಯಲ್ಲಿತ್ತು. ನಂತರ ಹುಝೂರೆ ಅನ್ವರ್ ಜುಮುಅ ನಮಾಝ್‌ನೊಂದಿಗೆ ಅಸರ್ ನಮಾಝ್ ಒಟ್ಟುಗೂಡಿಸಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರೆ ಅನ್ವರ್ ತಮ್ಮ ವಸತಿಯತ್ತ ತೆರಳಿದರು.

### 29 ಸೆಪ್ಟೆಂಬರ್ ಗುರುವಾರ

ಹುಝೂರ್ ಅನ್ವರ್(ಅಬಿಅ) ಮುಂಜಾನೆ 5 ಗಂಟೆ 50 ನಿಮಿಷಕ್ಕೆ ಮಸ್ಜಿದ್ ಫತಹ್ ಅಝೀಮ್‌ಗೆ ಆಗಮಿಸಿ ಫಜರ್ ನವಾಝ್ ನಿರ್ವಹಿಸಿಕೊಟ್ಟು ತಮ್ಮ ವಸತಿಗೆ ತೆರಳಿದರು. ನಂತರ ವಿವಿಧ ದೇಶಗಳಿಂದ ಬಂದ Fax ಮತ್ತು ಇ-ಮೇಲ್‌ಗಳನ್ನು ಪರಿಶೀಲಿಸಿ ನಿರ್ದೇಶನಗಳನ್ನು ನೀಡಿದ ನಂತರ ಇತರ ಕಚೇರಿ ಕೆಲಸದಲ್ಲಿ ನಿರತರಾದರು.

1 ಗಂಟೆ 30 ನಿಮಿಷಕ್ಕೆ ಹುಝೂರ್ ಅನ್ವರ್(ಅಬಿಅ) ಮಸ್ಜಿದ್ ಫತಹ ಅಝೀಮ್‌ಗೆ ಆಗಮಿಸಿ ಝುಹರ್ ಅಸರ್ ನಮಾಝುಗಳನ್ನು ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ತಮ್ಮ ವಸತಿಯತ್ತ ತೆರಳಿದರು.

ಹುಝೂರ್ ಅನ್ವರ್(ಅಬಿಅ) ನಮಾಝ್ ನಿರ್ವಹಿಸಲು ಮಸ್ಜಿದ್ ಫತಹಕ್ಕೆ ಆಗಮಿಸುವಾಗ ಮತ್ತು ನಿರ್ಗಮಿಸುವಾಗ. ರಸ್ತೆಯ ಇಕ್ಕೆಲ್ಲಗಳಲ್ಲಿ ಜಮಾಅತ್ ಬಾಂಧವರು ನಿಂತು ತಮ್ಮ ಇಮಾಮರಿಗೆ ಶುಭವನ್ನು ಕೋರುವ ಮತ್ತು ತನ್ನ ಪ್ರೀತಿಯ ಭಾವನೆಗಳನ್ನು ಘೋಷಣೆಗಳ ಮೂಲಕ ವ್ಯಕ್ತಪಡಿಸುತ್ತಿದ್ದರು. ಎಲ್ಲ ಕಡೆಯಿಂದ ಅಸ್ಸಲಾಮು ಅಲೈಕುಂ ಹುಝೂರ್ "ಇನ್ನಿ ಮಅಕ ಯಾ ಮಸ್ರೂರ್" ಧ್ವನಿಗಳು ಮೊಳಗುತ್ತಿದ್ದವು. ಬಾಲಕಿಯರು ತಮ್ಮ ಪ್ರಾರ್ಥನಾ ಕವನಗಳ ಮೂಲಕ ಪ್ರೀತಿಯನ್ನು ವ್ಯಕ್ತಪಡಿಸುತ್ತಾರೆ.

ಮಸೀದಿಯ ಹೊರ ವಲಯದಲ್ಲಿ ವಿವಿಧ ಜಾಗಗಳಲ್ಲಿ ದೊಡ್ಡ ಸಂಖ್ಯೆಯಲ್ಲಿ ಮಾರ್ಕಿಗಳು ಹಾಕಿದ್ದರು. ಮೂರು ಮಾರ್ಕಿಗಳಲ್ಲಿ ಜಮಾಅತ್‌ನ ಪುರುಷ ಮತ್ತು ಮಹಿಳೆಯರಿಗೆ ನಮಾಝ್ ನಿರ್ವಹಿಸುವ ಏರ್ಪಾಡು ಮಾಡಲಾಗಿತ್ತು. ಎರಡು ದೊಡ್ಡ ಮಾರ್ಕಿಗಳಲ್ಲಿ ಪುರುಷ ಮತ್ತು ಮಹಿಳೆಯರಿಗಾಗಿ ಪ್ರತ್ಯೇಕ ಊಟದ ವ್ಯವಸ್ಥೆ ಮಾಡಲಾಗಿತು. ರಿಜಿಸ್ಟ್ರೇಷನ್ ಮತ್ತು ಕೋವಿಡ್ ತಪಾಸಣೆಗೋಸ್ಕರ ಪುರುಷರಿಗೆ ಮತ್ತು ಮಹಿಳೆಯರಿಗೆ ಪ್ರತ್ಯೇಕ ಮಾರ್ಕಿಗಳು ಹಾಕಲಾಗಿತ್ತು. ಅದೇ ರೀತಿ ಅತಿಥಿಗಳಿಗೆ ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಮಾಡಲಾಗಿತ್ತು.

ಅಮೇರಿಕಾದ ವಿವಿಧ ಕ್ಷೇತ್ರಗಳಿಂದ ಎರಡು ಸಾವಿರ ಮೈಲಿಗಿಂತಲೂ ದೂರದಿಂದ ಪುರುಷರು, ಮಹಿಳೆಯರು ಇಲ್ಲಿ ಬಂದು ಸೇರಿದ್ದರು. ಅವರು ದಿನವಿಡಿ ಇದೇ ಮಾರ್ಕಿಗಳಲ್ಲಿ ಕಳೆಯುತ್ತಾರೆ. ತಮ್ಮ ಇಮಾಮರ ದರ್ಶನ ಪಡೆಯುವ ಯಾವ ಕ್ಷಣವನ್ನು ಬಿಡಲು ಇಚ್ಛಿಸುವುದಿಲ್ಲ. ಇದು ತುಂಬಾ ಶುಭಕರ. ಕಾರುಣ್ಯಗಳ ಮತ್ತು ಅಲ್ಲಾಹನ ಅನುಗ್ರಹವನ್ನು ಪಡೆಯುವ ದಿನಗಳಾಗಿವೆ. ಇಲ್ಲಿ ಬಂದವರೆಲ್ಲರೂ ಈ ಅನುಗ್ರಹಗಳನ್ನು ಪಡೆಯುತ್ತಿದ್ದಾರೆ.

### ಕುಟುಂಬದ ಭೇಟಿಗಳು

ಕಾರ್ಯಕ್ರಮದನ್ವಯ 6 ಗಂಟೆ 10 ನಿಮಿಷಕ್ಕೆ ಹುಝೂರ್ ಅನ್ವರ್(ಅಬಿಅ) ತಮ್ಮ ಕಚೇರಿಗೆ ಆಗಮಿಸಿದರು ಮತ್ತು ಕುಟುಂಬ ಭೇಟಿಗಳು ಪ್ರಾರಂಭವಾದವು. **(ಮುಂದುವರಿಯುವುದು)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.